ಸಂವಿಧಾನ ಬಾಹಿರವಾಗಿ ಭೋವಿ ಜಾತಿ ದೃಢೀಕರಣ ಪತ್ರ ಎಷ್ಟು ಪ್ರಕರಣಗಳಲ್ಲಿ ನೀಡಲಾಗಿದೆ? (ದಿನಾಂಕ 01.04.2009 ರಿಂದ 30.01.2013ರ ವರೆಗಿನ ವಿವರಗಳನ್ನು ಒದಗಿಸುವುದು)

ಶ್ರೀ ಎ.ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂಧೀಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಆದೇಶದ ಪ್ರತಿ ಲಗತ್ತಿಸಿದೆ.

ಆ) ಅಂತಹ ಯಾವುದೇ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಇ) ಅಂತಹ ಯಾವುದೇ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಸ್ಥಾಪಿಸುವ ಬಗ್ಗೆ

112 (77)

ಶ್ರೀ ಸಿ.ಬಿ.ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ)

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾಳ ಹೋಬಳಿ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹುಳಿಯಾಳ ಹೋಬಳಿ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಈ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ?

ಶ್ರೀ ಆರ್.ಅಶೋಕ (ಮಾನ್ಯ ಉಪಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ)

ಅ) ಇಲ್ಲ.

ಆ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾಳ ಹೋಬಳಿ ಕೇಂದ್ರದ ಪ್ರದೇಶವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಇಲ್ಲಿನ ಬಹುತೇಕ ಸಾರಿಗೆ ಸೌಲಭ್ಯಗಳನ್ನು ಖಾಸಗಿಯವರಿಂದ ಒದಗಿಸಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಅವಶ್ಯಕತೆಗನುಗುಣವಾಗಿ ಸೂಕ್ತ ನಿವೇಶನವನ್ನು ನಿಗಮದ ವಶಕ್ಕೆ ಪಡೆದ ನಂತರ ನಿಗಮದ ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಈ ಬಗ್ಗೆ ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಗೆ ಸಮರ್ಪಕ ವಿದ್ಯುತ್ ಸೌಲಭ್ಯ

68 : (176)

ಶ್ರೀ ಖಾದರ್ ಯು.ಟಿ.(ಮಂಗಳೂರು)

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಅವಶ್ಯವಿರುವ ವಿದ್ಯುತ್ ಯೂನಿಟ್‌ಗಳ ಪ್ರಮಾಣ ಎಷ್ಟು;

ಆ) ಪ್ರಸ್ತುತ ಎಷ್ಟು ಯೂನಿಟ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ;

ಇ) ಹಾಗಿದ್ದಲ್ಲಿ ಯಾವ ಸಮಯದಲ್ಲಿ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ (ವಿಧಾನ ಸಭಾ ಕ್ಷೇತ್ರವಾರು ವಿವರ ಒದಗಿಸುವುದು)

ಈ) ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

ಅ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುತ್ ಸರಬರಾಜು ಮಾಡಲು ದಿನವಹಿ ಸರಾಸರಿ 5.2 ದಶಲಕ್ಷ ಯೂನಿಟ್ ವಿದ್ಯುತ್ ಅಗತ್ಯವಿರುತ್ತದೆ.

ಆ) ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಗೆ ದಿನವಹಿ ಸರಾಸರಿ 4.33 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಸರಾಸರಿಯಾಗಿ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ.

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರ	ಫೀಡರ್‌ಗಳು	
		ನಗರ	ಗ್ರಾಮಾಂತರ
1	ಮಂಗಳೂರು ಉತ್ತರ	2 ಗಂಟೆಗಳು	–
2	ಮಂಗಳೂರು ದಕ್ಷಿಣ	2 ಗಂಟೆಗಳು	–
3	ಮಂಗಳೂರು	2 ಗಂಟೆಗಳು	6 ಗಂಟೆಗಳು
4	ಮೂಡಬಿದರೆ–ಮುಲ್ಕಿ	3 ಗಂಟೆಗಳು	6 ಗಂಟೆಗಳು
5	ಬಂಟ್ವಾಳ	3 ಗಂಟೆಗಳು	6 ಗಂಟೆಗಳು
6	ಬೆಳ್ತಂಗಡಿ	3 ಗಂಟೆಗಳು	6 ಗಂಟೆಗಳು
7	ಪುತ್ತೂರು	3 ಗಂಟೆಗಳು	6 ಗಂಟೆಗಳು
8	ಸುಳ್ಯ	3 ಗಂಟೆಗಳು	6 ಗಂಟೆಗಳು

ಇದಲ್ಲದೆ ಅನಿವಾರ್ಯ ಸಂದರ್ಭಗಳಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಅನಿರೀಕ್ಷಿತ ಕುಂಠಿತ ಉಂಟಾಗಿ, ವಿದ್ಯುತ್ ಜಾಲದಲ್ಲಿ ವಿದ್ಯುತ್ ಕೊರತೆಯುಂಟಾದಾಗ ವಿದ್ಯುತ್ ಜಾಲದ ಒತ್ತಡವನ್ನು ಸರಿದೂಗಿಸಲು ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ಈ) ರಾಜ್ಯ ಸರ್ಕಾರವು ವಿದ್ಯುತ್ ಕೊರತೆಯನ್ನು ನೀಗಲು ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಹೊಂದಲು ಮುಂಬರುವ ವರ್ಷಗಳಲ್ಲಿ ಸುಮಾರು 10000 MW ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ದೀರ್ಘಾವಧಿ ಯೋಜನೆಗಳನ್ನು ರೂಪಿಸಲಾಗಿದೆ.

ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಕಾಮಗಾರಿ

88 : (201)

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಅ) ಸಿಂಧನೂರಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯು ಸ್ಥಗಿತಗೊಂಡಿರಲು ಕಾರಣಗಳೇನು; (ವಿವರಗಳನ್ನು ನೀಡುವುದು)

ಇ) ಬಸ್ ನಿಲ್ದಾಣದ ಕಾಮಗಾರಿಗಾಗಿ ಸರ್ಕಾರ ನಿಗಧಿಪಡಿಸಿದ್ದ ಅನುದಾನದ ಮೊತ್ತ ಎಷ್ಟು ಮತ್ತು ಈವರೆಗೂ ವೆಚ್ಚವಾಗಿರುವ ಮೊತ್ತ ಎಷ್ಟು; (ವಿವರಗಳನ್ನು ನೀಡುವುದು)

ಈ) ಕಾಮಗಾರಿಯು ಈ ರೀತಿ ಸ್ಥಗಿತಗೊಂಡಿರುವುದರಿಂದ ಯೋಜನಾ ವೆಚ್ಚ ಹೆಚ್ಚಾಗುವುದಿಲ್ಲವೇ;

ಉ) ಹಾಗಿದ್ದಲ್ಲಿ, ಈ ಬಸ್ ನಿಲ್ದಾಣದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಊ) ಈ ಬಸ್ ನಿಲ್ದಾಣದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ನಿಗಧಿಪಡಿಸಿದೆಯೇ;

ಋ) ಹಾಗಿದ್ದಲ್ಲಿ, ಇದುವರೆಗೂ ಕಾಮಗಾರಿಯನ್ನು ಪೂರ್ಣಗೊಳಿಸದಿರಲು ಕಾರಣಗಳೇನು?

ಶ್ರೀ ಆರ್.ಅಶೋಕ (ಮಾನ್ಯ ಉಪಮುಖ್ಯಮಂತ್ರಿಗಳು (ಗೃಹ ಮತ್ತು ಸಾರಿಗೆ))

ಅ) ಬಂದಿದೆ. ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

ಆ) ಸಿಂಧನೂರು ಬಸ್ ನಿಲ್ದಾಣದ ಕಾಮಗಾರಿಯನ್ನು ದಿನಾಂಕ 19/8/2008 ರಂದು ಪ್ರಾರಂಭಿಸಿದ್ದು, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದ ಕಾರಣ ಸದರಿಯವರ ಟೆಂಡರ್‌ನ್ನು ರದ್ದುಪಡಿಸಲಾಗಿರುತ್ತದೆ. ನಂತರ, ಈ ಟೆಂಡರ್ ರದ್ಧತಿ ವಿರುದ್ಧ ಮೂಲ ಗುತ್ತಿಗೆದಾರರಾದ ಮೆ:ವಾಟರ್ ಅಂಡ್ ಪಾವರ್ ಇಂಜಿನಿಯರಿಂಗ್ ರವರು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯವು ಮರು ಟೆಂಡರ್‌ಗೆ ತಡೆಯಾಜ್ಞೆ ನೀಡಿ, ಮೂಲ ಗುತ್ತಿಗೆದಾರರಿಗೆ ಇನ್ನೊಂದು ಅವಕಾಶ ಕೊಡಬೇಕೆಂದು ಆದೇಶಿಸಲಾಗಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದಂತೆ, ಮೂಲ ಗುತ್ತಿಗೆದಾರರಿಗೆ ಕೆಲಸ ವಹಿಸಿಕೊಡಲಾಗಿದ್ದು, ಕಾಮಗಾರಿ ಮುಕ್ತಾಯದ ಹಂತದಲ್ಲಿರುತ್ತದೆ.

ಇ) ಈ ಕಾಮಗಾರಿಯ ಟೆಂಡರ್‌ನಲ್ಲಿ ಮೊತ್ತ ರೂ.277.00 ಲಕ್ಷಗಳು ಹಾಗೂ ಈವರಗೆ ಖರ್ಚಾದ ಮೊತ್ತ ರೂ.2,48,02,705.00 ಗಳಾಗಿರುತ್ತವೆ.

ಈ) ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರದಂತೆ ಕಾಮಗಾರಿ ನಿರ್ವಹಿಸುತ್ತಿರುವುದರಿಂದ ಹೆಚ್ಚಿನ ವೆಚ್ಚವಾಗುವ ಸಾಧ್ಯತೆ ಇರುವುದಿಲ್ಲ.

ಉ) ಈಗಾಗಲೇ ಸದರಿ ಬಸ್ ನಿಲ್ದಾಣದ ಕಾಮಗಾರಿ ಮುಕ್ತಾಯದ ಹಂತದಲ್ಲಿರುತ್ತದೆ.

ಊ) ಶೀಘ್ರದಲ್ಲಿ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗುವುದು.

ಋ) ಗುತ್ತಿಗೆದಾರರ ವಿಳಂಬದಿಂದಾಗಿ ಕಾಮಗಾರಿ ಪೂರ್ಣಗೊಳಿಸುವಲ್ಲಿ ತೊಂದರೆಯಾಗಿರುತ್ತದೆ. ಈಗಾಗಲೇ ಬಸ್ ನಿಲ್ದಾಣದ ಮುಖ್ಯ ಕಟ್ಟಡದ ಮೇಲ್ಛಾವಣಿ ಅಳವಡಿಸಲಾಗಿದ್ದು, ಬಸ್ ನಿಲ್ದಾಣದ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಶೀಘ್ರವಾಗಿ ಪ್ರಯಾಣಿಕರ ಉಪಯೋಗಕ್ಕೆ ಬಿಟ್ಟು ಕೊಡಲಾಗುವುದು.

ನಿವೇಶನ / ವಸತಿ ಸೌಕರ್ಯ

70 (178)

ಶ್ರೀ ಖಾದರ್ ಯು.ಟಿ. (ಮಂಗಳೂರು)

ಅ) ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ನಿವೇಶನ ರಹಿತ ಮತ್ತು ವಸತಿ ರಹಿತರ ಸಂಖ್ಯೆ ಎಷ್ಟು; ಈ ಪೈಕಿ ಗುಡಿಸಲು ವಾಸಿಗಳ ಸಮೀಕ್ಷೆ ಆಗಿದ್ದರೆ ವಿವರ ಒದಗಿಸುವುದು;

ಆ) ಹಾಗಿದ್ದಲ್ಲಿ, ವಸತಿ ಹಾಗೂ ನಿವೇಶನ ರಹಿತರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಗುಡಿಸಲು ವಾಸಿಗಳಿಗೆ ಅದೇ ಸ್ಥಳದಲ್ಲಿ ನಿವೇಶನ ಮಂಜೂರು ಮಾಡಲಾಗುವುದೇ? (ವಿವರ ಒದಗಿಸುವುದು)

ಶ್ರೀ ವಿ.ಸೋಮಣ್ಣ (ಮಾನ್ಯ ವಸತಿ ಸಚಿವರು)

ಅ) ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ನಿವೇಶನ ರಹಿತ ಮತ್ತು ವಸತಿ ರಹಿತರ ಸಂಖ್ಯೆ ಈ ಕೆಳಗಿನಂತೆ ಇರುತ್ತದೆ.

ಪ್ರದೇಶ	ವಸತಿ ರಹಿತರು	ನಿವೇಶನ ರಹಿತರು	ಒಟ್ಟು
ಗ್ರಾಮೀಣ	1933	6628	8561
ನಗರ	32	644	676
ಒಟ್ಟು	**1965**	**7272**	**9237**

ಈ ಪೈಕಿ ಗುಡಿಸಲು ವಾಸಿಗಳ ಸಮೀಕ್ಷೆ ಆಗಿದ್ದು ಅದರ ವಿವರ ಈ ಕೆಳಗಿನಂತೆ ಇರುತ್ತದೆ.

1. ಗ್ರಾಮೀಣ ಪ್ರದೇಶದಲ್ಲಿ 780 ಗುಡಿಸಲು ವಾಸಿಗಳಿದ್ದಾರೆ.

2. ನಗರ ಪ್ರದೇಶದಲ್ಲಿ 32 ಗುಡಿಸಲು ವಾಸಿಗಳಿದ್ದಾರೆ.

ಆ) ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ ವಸತಿ ರಹಿತರಿಗೆ 2010-11ನೇ ಸಾಲಿನಿಂದ 2012-13ನೇ ಸಾಲಿನವರೆಗೂ ಈ ಕೆಳಗಿನಂತೆ ಮನೆಗಳನ್ನು ಮಂಜೂರು ಮಾಡಲಾಗಿದೆ.

ಕ್ರಮ ಸಂಖ್ಯೆ	ಯೋಜನೆಗಳು	ಮಂಜೂರಾದ ಮನೆಗಳ ಸಂಖ್ಯೆ			
		2010-11	**2011-12**	**2012-13**	**ಒಟ್ಟು**
1	ಬಸವ ವಸತಿ ಯೋಜನೆ	4000	0	0	4000
2	ಇಂದಿರಾ ಅವಾಸ ಯೋಜನೆ	0	168	147	315
3	ಅಂಬೇಡ್ಕರ್ ವಸತಿ ಯೋಜನೆ	0	52	0	52
4	ವಾಜಪೇಯಿ ನಗರ ವಸತಿ ಯೋಜನೆ	125	0	300	425
ಒಟ್ಟು		**4125**	**220**	**447**	**4792**

ನಿವೇಶನ ರಹಿತರಿಗೆ ನಿವೇಶನಗಳನ್ನು ನೀಡಲು ನಗರ ಪ್ರದೇಶದಲ್ಲಿ ವಾಜಪೇಯಿ ನಗರ ನಿವೇಶನ ಯೋಜನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಆಶ್ರಯ ಗ್ರಾಮೀಣ ನಿವೇಶನ ಯೋಜನೆಗಳು ಜಾರಿಯಲ್ಲಿರುತ್ತವೆ. ಈ ಯೋಜನೆಗಳ ಮೂಲಕ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕೆಳಗಿನಂತೆ ನಿವೇಶನ ಯೋಜನೆಯಡಿ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ಯೋಜನೆಗಳು	ನೀಡಲಾದ ಗುರಿ			
		2010–11	**2011–12**	**2012–13**	**ಒಟ್ಟು**
1	ಆಶ್ರಯ ಗ್ರಾಮೀಣ ನಿವೇಶನ ಯೋಜನೆ	1741	320	86	2147
2	ವಾಜಪೇಯಿ ನಗರ ನಿವೇಶನ ಯೋಜನೆ	176	340	184	700
ಒಟ್ಟು		**1917**	**660**	**270**	**2847**

ಇ) ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಗುಡಿಸಲು ವಾಸಿಗಳಿಗೆ ಅದೇ ಸ್ಥಳದಲ್ಲಿ ನಿವೇಶನ ಮಂಜೂರು ಮಾಡಲಾಗುವುದಿಲ್ಲ.

ಖಾಸಗಿ ಎಕ್ಸ್‌ಪ್ರೆಸ್ ಬಸ್ಸುಗಳು

79 : (70)

ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ–ಶಿಕಾರಿಪುರ–ಆನವಟ್ಟಿ–ಹಾನಗಲ್ ಹಾಗೂ ಜಿಲ್ಲೆಯ ಇತರೆ 55 ರೂಟ್‌ಗಳಲ್ಲಿ ಸಂಚರಿಸುತ್ತಿರುವ ಖಾಸಗಿ ಎಕ್ಸ್‌ಪ್ರೆಸ್ ಬಸ್‌ಗಳ ಸಂಖ್ಯೆ ಎಷ್ಟು? ಈ ಮಾರ್ಗಗಳಲ್ಲಿ ಪ್ರಯಾಣಿಕರ ಜನದಟ್ಟಣೆ ಕಡಿಮೆ ಮಾಡಲು ಕೆಎಸ್‌ಆರ್‌ಟಿಸಿ ಡಿವಿಜನಲ್ ಕಂಟ್ರೋಲರ್ ದಾವಣಗೆರೆ ಇವರು ಹೊಸ ಪರ್ಮಿಟ್‌ಗಳನ್ನು ಕೋರಿ ಸಲ್ಲಿಸಿದ ಮನವಿಗಳ ಬಗ್ಗೆ ಶಿವಮೊಗ್ಗ ಜಿಲ್ಲಾಡಳಿತ ತೆಗೆದುಕೊಂಡ ಕ್ರಮಗಳೇನು;

ಆ) ಶಿವಮೊಗ್ಗ ಕೆ.ಎಸ್.ಆರ್.ಟಿ.ಸಿ. ಕಛೇರಿಯು ಸುಸಜ್ಜಿತವಾಗಿದ್ದು, ಈಗಾಗಲೇ ಹೊನ್ನಾಳಿ ಡಿಪೋ ಪ್ರಾರಂಭಿಸಲು ಎಲ್ಲಾ ಸಿದ್ಧತೆಗಳೂ ಆಗಿರುತ್ತದೆ

ಮತ್ತು ಶಿವಮೊಗ್ಗ ವೊಲ್ವೋ ಬಸ್ ಡಿಪೋ, ನಗರ ಸಾರಿಗೆ ಡಿಪೋ ಸ್ಥಾಪಿಸಲು ಎಲ್ಲಾ ಆಡಳಿತಾತ್ಮಕ ಪ್ರಕ್ರಿಯೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ರಸ್ತೆ ಸಾರಿಗೆ ನಿಗಮದ ವಿಭಾಗೀಯ ಕಛೇರಿ ರಚಿಸಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಇ) ರಾಜ್ಯದ ದಿನದ 24 ಗಂಟೆಯ ಕಾರ್ಯ ನಿರ್ವಹಿಸುತ್ತಿರುವ ಶಿವಮೊಗ್ಗ ಬಸ್ ನಿಲ್ದಾಣಕ್ಕೆ (ಜಿ.ಪಿ.ಎಸ್ ಸೌಲಭ್ಯ ಒದಗಿಸಿ) ಇನ್ನು ಹೆಚ್ಚಿನ ಮೂಲಭೂತ ಸೌಕರ್ಯ ಒದಗಿಸಲಾಗುವ ಅನುದಾನವೆಷ್ಟು? (ವಿವರ ನೀಡುವುದು)

ಶ್ರೀ ಆರ್.ಅಶೋಕ (ಮಾನ್ಯ ಉಪಮುಖ್ಯಮಂತ್ರಿಗಳು (ಗೃಹ ಮತ್ತು ಸಾರಿಗೆ))

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ-ಶಿಕಾರಿಪುರ-ಆನವಟ್ಟಿ-ಹಾನಗಲ್ ಮಾರ್ಗದಲ್ಲಿ ಒಟ್ಟು 15 ಖಾಸಗಿ ಬಸ್‌ಗಳಿಂದ 30 ಎಕ್ಸ್‌ಪ್ರೆಸ್ ಟ್ರಿಪ್‌ಗಳು ಆಚರಣೆಯಲ್ಲಿರುತ್ತವೆ.

ಆ) ಇತರೆ 55 ಮಾರ್ಗಗಳಲ್ಲಿ 24 ಖಾಸಗಿ ಎಕ್ಸ್‌ಪ್ರೆಸ್ ಬಸ್‌ಗಳು ಆಚರಣೆಯಲ್ಲಿವೆ.

ಇ) ಪರವಾನಗಿ ಮಂಜೂರಾತಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಟ್ಟು 60 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ದಿನಾಂಕ: 15-2-2013ರಂದು ನಡೆಯಲಿರುವ ಪ್ರದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗುವುದು.

ಈ) ಶಿವಮೊಗ್ಗ, ಭದ್ರಾವತಿ ಹಾಗೂ ಸಾಗರ ಘಟಕಗಳು ಶಿವಮೊಗ್ಗ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸದರಿ 3 ಘಟಕಗಳಿಂದ ಪ್ರಸ್ತುತ ಒಟ್ಟಾರೆ 206 ಅನುಸೂಚಿಗಳನ್ನು ಕಾರ್ಯಚರಣೆಗೊಳಿಸಲಾಗುತ್ತಿದೆ. ಈ ಪ್ರಮಾಣದ ಅನುಸೂಚಿಗಳನ್ನು ಪರಿಗಣಿಸಿ, ನಿಗಮದ ವಿಭಾಗ ಕಛೇರಿಯನ್ನು ಶಿವಮೊಗ್ಗದಲ್ಲಿ ಸ್ಥಾಪಿಸುವುದು ಸಂಸ್ಥೆಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದರಿಂದ ವಿಭಾಗ ಸ್ಥಾಪಿಸುವುದು ಸಮಂಜಸವೆನಿಸುವುದಿಲ್ಲ. ಮುಂಬರುವ ದಿನಗಳಲ್ಲಿ ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸ ಘಟಕಗಳು ಪ್ರಾರಂಭವಾಗಿ ಅನುಸೂಚಿಗಳನ್ನು

ಹೆಚ್ಚಿಸಿದಾಗ, ಪ್ರತ್ಯೇಕ ವಿಭಾಗ ಕಛೇರಿಯ ಸ್ಥಾಪನೆ ಅವಶ್ಯಕತೆಯುಂಟಾದಾಗ, ಆ ವೇಳೆಯಲ್ಲಿ ಈ ಕುರಿತು ಪರಿಶೀಲಿಸಲಾಗುವುದು.

ಇ) ಶಿವಮೊಗ್ಗ ಬಸ್ಸು ನಿಲ್ದಾಣಕ್ಕೆ ಜಿ.ಪಿ.ಎಸ್ ಅಳವಡಿಸುವ ಪ್ರಸ್ತಾವನೆ ಇರುವುದಿಲ್ಲ.

2008–09 ನೇ ಸಾಲಿನ ಆಯವ್ಯಯ

93 (166)

ಶ್ರೀ ನರೇಂದ್ರ. ಆರ್ (ಹನೂರು)

ಅ) 2008–09 ನೇ ಸಾಲಿನಿಂದ ಸಮಾಜ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ಘೋಶಿಸಿದ್ದ ಹೊಸ ಯೋಜನೆಗಳು ಯಾವುವು, ಅವುಗಳಿಗೆ ಒದಗಿಸಿರುವ ಅಂದಾಜು ಅನುದಾನವೆಷ್ಟು; ಎಷ್ಟು ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚವಾಗಿದೆ; ಫಲಾನುಭವಿಗಳೆಷ್ಟು (ವರ್ಷವಾರು ವಿವರ ಒದಗಿಸುವುದು).

ಆ) 2008–09 ನೇ ಸಾಲಿನಿಂದ ಆಯವ್ಯಯದಲ್ಲಿ ಷೋಷಿಸಿರುವ ಸಮಾಜ ಕಲ್ಯಾಣ ಇಲಾಖೆಯ ಯೋಜನೆ ಹಾಗೂ ಯೋಜನೇತರ ಅನುದಾನವೆಷ್ಟು; ಎಷ್ಟು ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚವಾಗಿದೆ (ವಿವರ ಒದಗಿಸುವುದು).

ಶ್ರೀ ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)

ಅ)

1. <u>ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ.</u>
   2008–09 ನೇ ಸಾಲಿನಿಂದ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
2. <u>ಪರಿಶಿಷ್ಟ ವರ್ಗಗಳ ನಿರ್ದೇಶನಾಲಯಕ್ಕೆ ಸಂಬಂಧಿಸಿಂದಂತೆ</u>
   ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1. <u>ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ</u>

2008–09 ನೇ ಸಾಲಿನಿಂದ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2. **<u>ಪರಿಶಿಷ್ಟ ವರ್ಗಗಳ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ</u>**
   2008–09 ನೇ ಸಾಲಿನಿಂದ ಆಯವ್ಯಯದಲ್ಲಿ ಒದಗಿಸಲಾದ ಬಿಡುಗಡೆಯಾದ ವೆಚ್ಚವಾದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
3. **<u>ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿಂದಂತೆ</u>**
   ಅನುಬಂಧದಲ್ಲಿ ನೀಡಲಾಗಿದೆ.
4. **<u>ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಕ್ಕೆ ಸಂಬಂಧಿಸಿದಂತೆ</u>**
   ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಅನುಬಂಧ

2008-09 ರಿಂದ 2012-13 ನೇ ಸಾಲಿನವರೆಗಿನ ಆಯವ್ಯಯದ ಬಾಷಣದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಘೋಸಿಸಲಾದ ಹೊಸ ಕಾರ್ಯಕ್ರಮಗಳ
ಹೊಸ ಕಾರ್ಯಕ್ರಮಗಳ ವಿವರ

ರೂ. ಲಕ್ಷಗಳಲ್ಲಿ

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
2008-09	ಯಾವುದೇ ಹೊಸ ಯೋಜನೆಯ ಘೋಷಣೆ ಇರುವುದಿಲ್ಲ.				
2009-10	ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜೀವನಮಟ್ಟವನ್ನು ಸುಧಾರಿಸಲು ಅವರಿಗೆ ವಸತಿ ಸೌಲಭ್ಯ, ಉದ್ಯೋಗಾವಕಾಶಗಳು ಮುಂತಾದ ಕನಿಷ್ಟ ಜೀವನ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಆ ವರ್ಗಗಳ ಮಕ್ಕಳು ಹಾಗೂ ಯುವಕರಿಗೆ ಉತ್ತಮ ಶಿಕ್ಷಣ ಸೌಕರ್ಯಗಳನ್ನು ನೀಡುವುದರಿಂದ ಅವರ ಶಾಶ್ವತ ಅಭಿವೃದ್ಧಿ ಸಾಧ್ಯವಾಗುತ್ತದೆ. ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿದ್ದ ಘೋಷಣಾ ವೆಚ್ಚವನ್ನು ಮಾಸಿಕ ರೂ.450 ರಿಂದ ರೂ. 600 ಕ್ಕೆ ಹೆಚ್ಚಿಸಿದ್ದು ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. ಈ ವರ್ಷದ ಮುಂಗಡ ಪತದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಆದ್ಯತೆಯನ್ನು ನೀಡಿ ಅವರ ಅಭಿವೃದ್ಧಿಗಾಗಿ ಈ ಕೆಳಕಂಡ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗುವುದು.				
	1. ಕ್ರೋಢೀಕೃತ ಅನುದಾನ (pooled Fund)ದಲ್ಲಿ ಹೆಚ್ಚಳ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಅಭಿವೃದ್ಧಿ ಯೋಜನೆ ಅಡಿಯಲ್ಲಿ	47854.49	34854.49	34854.49	29 ಯೋಜನೆಗಳು

	ವಿವಿದ ಇಲಾಖೆಗಳಿಗೆ ನೀಡಿರುವ ಅನುದಾನವನ್ನು ಆ ವರ್ಗಗಳ ಜನರಿಗೆ ಹೆಚ್ಚು ಪ್ರಯೋಜನಕಾರಿಯಾದ ಯೋಜನೆಗಳು. ಆಂದರೆ ವಸತಿ, ಶಿಕ್ಷಣ ಸೌಕರ್ಯ ಮುಂತಾದ ವೆಚ್ಚಗಳಿಗಾಗಿ ಕ್ರೋಢೀಕರಿಸಲಾಗಿತ್ತಿದೆ. ಈ ಕ್ರೋಢೀಕೃತ ಅನುದಾನದ (pooled Fund) ಮೊತ್ತವನ್ನು 2009-10ರಲ್ಲಿ ರೂ. 200 ಕೋಟಿಯಿಂದ ರೂ. 600 ಕೋಟಿಗೆ ಹೆಚ್ಚಸಲಾಗುವುದು.				
	2. ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳಲ್ಲಿರುವ ನಿಲಯಾರ್ಥಿಗಳ ಭೋಜನ ವೆಚ್ಚವನ್ನು ಪ್ರತಿ ತಿಂಗಳಿಗೆ ರೂ.350 ರಿಂದ ರೂ.500ಕ್ಕೆ ಹೆಚ್ಚಿಸಲಾಗುವುದು.	ಭೋಜನಾ ವೆಚ್ಚವನ್ನು ಹೆಚ್ಚಿಸಲಾಗಿದೆ.			
	3. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣುಮಕ್ಕಳ ವಿಧ್ಯಾಭ್ಯಾಸದ ಪ್ರಮಾಣವು ಅತ್ಯಂತ ಕಡಿಮೆ ಇದೆ. 2009-10 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ "114 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ" ಗಳನ್ನು ತೆರೆಯಲು ರೂ.100 ಕೋಟಿ ಅನುದಾನ ನೀಡಲಾಗುವುದು. ಈ ಶಾಲೆಗಳಲ್ಲಿ ಶೇ.25 ರಷ್ಟು ಇತರ ವರ್ಗಗಳ ವಿಧ್ಯಾರ್ಥಿನೀಯರಿಗೆ ಅವಕಾಶ ನೀಡಲಾಗುವುವು.	1000.00	1000.00	1000.00	82 ಶಾಲೆಗಳು

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
	4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಣ್ಣುಮಕ್ಕಳ ವಿಧ್ಯಾಭ್ಯಾಸವನ್ನು ಪ್ರೋತ್ಸಾಹಿಸಲು 10ನೇ ತರಗತಿಯಲ್ಲಿ ಶೇ 75 ಕ್ಕಿಂತಲೂ ಹೆಚ್ಚು ಅಂಕಗಳಿಸಿದ ಹೆಣ್ಣು ಮಕ್ಕಳಿಗೆ ರೂ.10000 ಮತ್ತು ಶೇ 60 ಕ್ಕಿಂತಲೂ ಹೆಚ್ಚು ಅಂಕಗಳಿಸಿದ ಹೆಣ್ಣು ಮಕ್ಕಳಿಗೆ ರೂ.5000 ಪ್ರೋತ್ಸಾಹ ಧನವನ್ನು ನೀಡಲಾಗುವುದು.	1579.00	1579.00	1579.00	26097 ವಿದ್ಯಾರ್ಥಿಗಳು
	5. ವಿದ್ಯಾರ್ಥಿ ನಿಲಯಗಳಲ್ಲಿ ನಿಲಯಾರ್ಥಿಗಳ ಸಂಖ್ಯೆಯನ್ನು ಶೇ 50 ರಷ್ಟು ಹೆಚ್ಚಿಸಲಾಗುವುದು ಅವರ ಕೌಶಲ್ಯವನ್ನು ಉನ್ನತಿಗೊಳಿಸಿ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ಅವರಿಗೆ ಕಂಪ್ಯೂಟರ್ ತರಬೇತಿ, ಭಾಷಾಜ್ಞಾನ ಹಾಗೂ ಗಣಿತ ವಿಷಯಗಳಲ್ಲಿ ವಿಶೇಷ ಶಿಕ್ಷಣದ ವ್ಯವಸ್ಥೆ ಮಾಡಲು ರೂ.20 ಕೋಟಿ ಒದಗಿಸಲಾಗಿದೆ.	1025.00	1025.00	1025.00	1670ವಿದ್ಯಾರ್ಥಿನಿಲಯಗಳು
	6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಗಳನ್ನು ಅಭಿವೃದ್ಧಿ ಪಡಿಸಲು ರೂ.100 ಕೋಟಿ ಒದಗಿಸಲಾಗುವುದು.	1842.92	1842.92	1842.92	178 ಗ್ರಾ.ವಿ.ಸ.ಕ್ಷೇತ್ರ
	7. ಲಿಡ್ಕರ್ ಸಂಸ್ಥೆಯನ್ನು ಜಗಜೀವನ್ ರಾಮ್ ಅಭಿವೃದ್ಧಿ ನಿಗಮವೆಂದು ಪುನರ್	500.00	350.00	350.00	

	ನಾಮಕರಣ ಮಾಡಿ ಚರ್ಮ ಕೈಗಾರಿಕೆಯನ್ನು ಅವಲಂಬಿಸಿರುವ ಕುಟುಂಬಗಳಿಗೆ ತಾಂತ್ರಿಕ ಸಹಾಯ ಹಾಗೂ ಮಾರುಕಟ್ಟೆ ಅವಕಾಶವನ್ನು ಕಲ್ಪಿಸಲು ರೂ.5 ಕೋಟಿ ನೀಡಲಾಗುವುದು.				
	8. ಬೆಂಗಳೂರು ನಗರದಲ್ಲಿ ಜಗಜೀವನ್ ರಾಮ್ ಸ್ಮಾರಕ ಭವನವನ್ನು ನಿರ್ಮಿಸಲು ರೂ.5 ಕೋಟಿ ಅನುದಾನ ನೀಡಲಾಗುವುದು.	125.00	125.00	125.00	1 ಭವನ
	9. ಬಂಜಾರ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ನಿಯಮಗಳನ್ನು ರೂಪಿಸಲಾಗುವುದು. 200 ಲಂಬಾಣಿ ತಾಂಡಾಗಳಲ್ಲಿ ಸೇವಾಲಾಲ್ ಸಮುದಾಯ ಭವನಗಳನ್ನು ನಿರ್ಮಿಸಲು ರೂ.10 ಲಕ್ಷದಂತೆ ಧನ ಸಹಾಯ ನೀಡಲಾಗುವುದು. ಗುಲ್ಬರ್ಗ, ಬಿಜಾಪುರ, ಹಾವೇರಿ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಬಂಜಾರ ಭವನಗಳ ನಿರ್ಮಾಣಕ್ಕೆ ತಲಾ ರೂ.2 ಕೋಟಿಯಂತೆ ರೂ.10 ಕೋಟಿ ನೀಡಲಾಗುವುದು.	3336.07	3336.07	3336.07	70 ತಾಂಡಾಗಳು 3 ಜಿಲ್ಲೆಗಳಲ್ಲಿ 3 ಭವನಗಳು

2010-11	1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಸರ್ವತೋಮುಖ ಏಳಿಗೆಯನ್ನು ಸಾಧಿಸಲು ಅವರಿಗೆ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸಲು ಅತ್ಯುತ್ತಮ ಮಾರ್ಗವಾಗಿದೆ. ಈ ದಿಸೆಯಲ್ಲಿ 2009-10 ರಲ್ಲಿ 14 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 114 "ಕಿತ್ತೂರು ಚೆನ್ನಮ್ಮ ವಸತಿ ಶಾಲೆಗಳನ್ನು" ರಾಜ್ಯದಲ್ಲಿ ಪ್ರಾರಂಭಿಸಲಾಯಿತು. ಈ ಶಾಲೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಸುಮಾರು 150 ಶಾಲೆಗಳಿಗೆ ಅಗತ್ಯವಿರುವ ಕಟ್ಟಡಗಳನ್ನು ಒದಗಿಸಲು 2010-11 ರಲ್ಲಿ ರೂ.150 ಕೋಟಿಗಳನ್ನು ಒದಗಿಸಲಾಗುತ್ತಿದೆ.	9000.00	9000.00	9000.00	14 ಕಟ್ಟಡಗಳು
	2. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗಾಗಿ ಕ್ರಮವಾಗಿ 1683 ಮತ್ತು 186 ವಿದ್ಯಾರ್ಥಿನಿಲಯಗಳಿವೆ. ಹಿಂದುಳಿದ ವರ್ಗಗಳಿಗಾಗಿ ಒಟ್ಟು 1760 ವಿದ್ಯಾರ್ಥಿನಿಲಯಗಳನ್ನು ಸಹ ಸರ್ಕಾರದಿಂದ ತೆರೆಯಲಾಗಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡುವ ಆಹಾರ ವೆಚ್ಚವನ್ನು ಕಳೆದ ವರ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಮಾಸಿಕ ರೂ.400 ರಿಂದ 600ಕ್ಕೆ ಮತ್ತು ಮೆಟ್ರಿಕ್	ಆಹಾರ ವೆಚ್ಚವನ್ನು ಹೆಚ್ಚಿಸಲಾಗಿದೆ			

	ನಂತರದ ವಿದ್ಯಾರ್ಥಿನಿಲಯಗಳಲ್ಲಿ ರೂ.450 ರಿಂದ 650 ಕ್ಕೆ ಹೆಚ್ಚಿಸಲಾಗಿತ್ತು. ಅವಶ್ಯಕ ಸಾಮಗ್ರಿಗಳ ಬೆಲೆಗಳಲ್ಲಿ ಏರಿಕೆ ಆಗಿರುವುದನ್ನು ಗಮನಿಸಿ ಈ ವೆಚ್ಚದ ಮಿತಿಯನ್ನು ಕ್ರಮವಾಗಿ ರೂ.650 ಮತ್ತು ರೂ.750ಕ್ಕೆ ಹೆಚ್ಚಿಸಲಾಗುವುದು. ಅದರಂತೆ 2010-11ರಲ್ಲಿ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಅನುದಾನವನ್ನು ಸಹ ಹೆಚ್ಚಿಸಲಾಗುವುದು.				

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
2010–11	3. ಪರಿಶಿಷ್ಟ ಜಾತಿಗಳು ಪರಿಶಿಷ್ಟ ವರ್ಗಗಳು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ಈಗ ನಡೆಸಲಾಗುತ್ತಿದ್ದು ಈ ವಿದ್ಯಾರ್ಥಿನಿಲಯಗಳಲ್ಲಿ ಸೀಮಿತ ಸಂಖ್ಯೆಯಲ್ಲಿ ಇತರ ವರ್ಗಗಳಿಗೆ ಪ್ರವೇಶ ನೀಡಲಾಗುತ್ತಿದೆ. ಈ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿ ಇನ್ನಷ್ಟು ವಿಸ್ತರಿಸಿ ಎಲ್ಲ ವರ್ಗಗಳಿಗೆ ನಿಗದಿತ ಪ್ರವೇಶಾವಕಾಶವಿರುವ ಮಾದರಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು 10 ಜಿಲ್ಲೆಗಳಲ್ಲಿ ತೆರೆಯಲು ರೂ.20 ಕೋಟಿ ವಿನಿಯೋಗಿಸಲಾಗುವುದು. ಇದರಿಂದ ವಿದ್ಯಾರ್ಥಿ ದೆಸೆಯಿಂದಲೂ ರಾಜ್ಯದ ಯುವಕ ಯುವತಿಯರಲ್ಲಿ ಸೋದರತ್ವ ಮತ್ತು ಸಮಾನತೆಯ ಭಾವನೆಯನ್ನು ಬೆಳಸಲು ಸಹಾಯವಾಗುವುದು.	1000.00	1000.00	1000.00	
	4. 2009–10ರಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಕ್ರಮವಾಗಿ ರೂ.2916.6 ಕೋಟಿ ಮತ್ತು ರೂ. 1144 ಕೋಟಿ ಒದಗಿಸಲಾಗಿತ್ತು. 2010–11ರಲ್ಲಿ ಈ ಮೊತ್ತವನ್ನು ರೂ.3358.78 ಕೋಟಿ ಮತ್ತು ರೂ.1344.19 ಕೋಟಿಗೆ ಏರಿಸಲಾಗಿದೆ.	3268.02	3268.02	3268.02	

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
	5. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅಡಿಯಲ್ಲಿ ಕ್ರೋಢೀಕೃತ ಅನುದಾನವನ್ನು 2010-11ರಲ್ಲಿ ಕ್ರಮವಾಗಿ ರೂ.617.2 ಕೋಟಿ ಮತ್ತು ರೂ. 182.8 ಕೋಟಿಗೆ ಹೆಚ್ಚಿಸಲಾಗುವುದು. 2009-10ಕ್ಕೆ ಹೋಲಿಸಿದರೆ ಇದರಿಂದ ಕ್ರೋಢೀಕೃತ ಅನುದಾನದಲ್ಲಿ ರೂ. 200 ಕೋಟಿ ಹೆಚ್ಚಳ ಆಗುವುದು.	6823.70	6823.70	6823.70	
	6. ರಾಜ್ಯದ . ಹತ್ತು ಜಿಲ್ಲೆಗಳಲ್ಲಿ ಜಗಜೀವನರಾಮ್ ಭವನಗಳನ್ನು ನಿರ್ಮಿಸಲು ರೂ.20 ಕೋಟಿ ಅನುದಾನ ನೀಡಲಾಗುವುದು.	1000.00	1000.00	1000.00	11 ಭವನ
2011-12	1. ಕಳೆದ ಎರಡು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಸಲಾಗಿದೆ. 2009-10 ರಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಕ್ರಮವಾಗಿ 2,917 ಕೋಟಿ ರೂ. ಮತ್ತು 1,144 ಕೋಟಿ ರೂ.ಗಳನ್ನು ಮತ್ತು 2010-11ನೇ ಸಾಲಿನಲ್ಲಿ 3,359 ಮತ್ತು 1,344 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. 2011-12 ರಲ್ಲಿ ಈ ಮೊತ್ತವನ್ನು 4,633 ಕೋಟಿ ರೂ. ಮತ್ತು 1,867 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.	463337.94	404515.72	393156.17	589226

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
	2. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ 2009-10ನೇ ಸಾಲಿನಲ್ಲಿ 600 ಕೋಟಿ ರೂ.ಗಳನ್ನು ಮತ್ತು 2010-11ನೇ ಸಾಲಿನಲ್ಲಿ 800 ಕೋಟಿ ರೂ.ಗಳ ಕ್ರೋಢೀಕೃತ ಅನುದಾನವನ್ನು ಒದಗಿಸಲಾಗಿತ್ತು. 2010-11ಕ್ಕೆ ಹೋಲಿಸಿದರೆ 2011-12ನೇ ಸಾಲಿನಲ್ಲಿ ಕ್ರೋಢೀಕೃತ ಅನುದಾನವನ್ನು 1,000 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.	74890.32	74890.32	74890.32	23 ಯೋಜನೆಗಳು

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
	3. ಕಿರು ಸಾಲ ಯೋಜನೆಯ ಅಡಿಯಲ್ಲಿ ಪ್ರಸ್ತುತ, 5,000 ರೂ.ಗಳ ಸಾಲ ಮತ್ತು ಸಬ್ಸಿಡಿಯನ್ನು ನೀಡಲಾಗುತ್ತಿದೆ. ಇದನ್ನು 10,000 ರೂ.ಗಳಿಗೆ ಹೆಚ್ಚಿಸಲಾಗುವುದು. (5,000 ರೂ.ಗಳ ಸಾಲ ಮತ್ತು 5,000 ರೂ.ಗಳ ಸಬ್ಸಿಡಿ) ಈ ಯೋಜನೆಯ ಅಡಿಯಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಡಾ//ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದವರು ಮಾಹಿತಿ ಒದಗಿಸಬೇಕಾಗಿರುತ್ತದೆ.			
	4. ಸ್ವಯಂ ಉದ್ಯೋಗಕ್ಕಾಗಿ ಪ್ರಸ್ತುತ ನೀಡಲಾಗುತ್ತಿರುವ 10,000 ರೂ.ಗಳ ಹಣಕಾಸು ನೆರವನ್ನು 25,000 ರೂ. ಗಳಿಗೆ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕಾಗಿ 12 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.	ಡಾ//ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದವರು ಮಾಹಿತಿ ಒದಗಿಸಬೇಕಾಗಿರುತ್ತದೆ.			
	5. ಬಹಳ ವರ್ಷಗಳಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಅವಶ್ಯಕವಾದ ಮೂಲಭೂತ ಸೌಕರ್ಯಗಳಿಲ್ಲದೆ ಅಲ್ಲಿಯ ಜನ ತೊಂದರೆ ಅನುಭವಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ ಪ್ರಾರಂಭಿಕವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ 300 ಕಾಲೋನಿಗಳ ಅಭಿವೃದ್ಧಿಗಾಗಿ ಪ್ರತಿ ಕಾಲೋನಿಗೆ 1 ಕೋಟಿ ರೂ. ನಂತೆ ಒಟ್ಟು 300 ಕೋಟಿ ರೂ. ನೀಡಲಾಗುವುದು.	23900.00	23900.00	23900.00	4780 ಎಸ್.ಸಿ. ಕಾಲೋನಿಗಳು

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
	6. 2010–11ನೇ ಸಾಲಿನಲ್ಲಿ, ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಭೋಜನಾ. ವೆಚ್ಚವನ್ನು 650 ರೂ.ಗಳಿಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 750 ರೂ.ಗಳಗೆ ಹೆಚ್ಚಿಸಲಾಗಿತ್ತು. 2011–12ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು 650 ರೂ.ಗಳಿಂದ 750 ರೂ.ಗಳಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 750 ರೂ.ಗಳಿಂದ 850 ರೂ.ಗಳಿಗೆ ಹೆಚ್ಚಿಸಲಾಗುವುದು.	ಹೆಚ್ಚಿಸಲಾಗಿದೆ			
	7. ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದ ಒಂದರಿಂದ ಏಳನೇ ತರಗತಿಯವರಿಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು 75 ರೂ.ಗಳಿಂದ 250 ರೂ.ಗಳಗೆ ಹೆಚ್ಚಸಲಾಗುವುದು ಮತ್ತು 8 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 100 ರೂ.ಗಳಿಂದ 500 ರೂ.ಗಳಿಗೆ ಹಚ್ಚಿಸಲಾಗುವುದು. ಈ ಕಾರ್ಯಕ್ರಮದಡಿ ಸುಮಾರು 25 ಲಕ್ಷ ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ.	ಹೆಚ್ಚಿಸಲಾಗಿದೆ			

ವರ್ಷ	ಆಯವ್ಯಯದ ಘೋಷಣೆ	ಅನುದಾನ	ಬಿಡುಗಡೆ	ಖರ್ಚು	ಫಲಾನುಭವಿಗಳ ಸಂಖ್ಯೆ
	8. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಬಾಲಕ ಮತ್ತು ಬಾಲಕಿಯರಿಗೆ ನರ್ಸಿಂಗ್, ಪ್ಯಾರಾ ಮೆಡಿಕಲ್. ಐಟಿಐ ಮತ್ತು ಇತರ ತಾಂತ್ರಿಕ ಕುಶಲತೆಯ ತರಬೇತಿ ನೀಡಲು 30 ಕೋಟಿ ರೂ.ಗಳನ್ನು ಒದಗಿಸಲಾಗಿದೆ ಇದರಿಂದಾಗಿ 30,000 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ.	1450.00	1450.00	1450.00	ನರ್ಸಿಂಗ್–7213 ಅಭ್ಯರ್ಥಿಗಳು ಪ್ಯಾರಾಮೆಡಿಕಲ್–141 ಅಭ್ಯರ್ಥಿಗಳು
	9. ಕಳೆದ ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತಿ ಪರಿಶಿಷ್ಟ ಪಂಗಡದವರಿಗಾಗಿ 15 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 50 ಹಾಸ್ಟೆಲ್‌ಗಳನ್ನು ಪೂರ್ಣಗೊಳಿಸಲಾಗಿದೆ ಪ್ರಸಕ್ತ ಸಾಲಿನಲ್ಲಿ ಮೊರರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು ಹಾಸ್ಟೆಲ್‌ಗಳನ್ನು ನಿರ್ಮಿಸಲು ಈವರೆವಿಗೂ 142 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. 2011–12ರಲ್ಲಿ ಈಗಾಗಲೇ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ಹಾಸ್ಟೆಲ್‌ಗಳನ್ನು ನಿರ್ಮಿಸಲು 150 ಕೋಟಿ ರೂ.ಗಳನ್ನು ಒದಗಿಸಲಾಗುವುದು.	7000.00	7000.00	7000.00	33 ಕಟ್ಟಡಗಳು
2012–13	1. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಒಟ್ಟು ವೆಚ್ಚವನ್ನು ರೂ. 7200 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಈ	87500.00	65625*	43750*	ಡಿಸೆಂಬರ್ 2012 ರ ಅಂತ್ಯದವರೆಗೆ*

	ಒಟ್ಟು ವೆಚ್ಚದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ನೀಡುವ ರಾಶಿ ಮೊತ್ತವನ್ನು 1250 ಕೋಟಿ ರೂ. ಗಳಿಗೆ ಹೆಚ್ಚಿಸಲಾಗಿದೆ.				
	2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮಗಳು 2005-06 ನೇ ಸಾಲಿನವರೆಗೆ ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳಿಗೆ ಒದಗಿಸಿರುವ ಹಾಗೂ ಇದುವರೆವಿಗೆ ಮರುಪಾವತಿಯಾಗದೇ ಉಳಿದಿರುವ 25000 ರೂ. ವರೆಗಿನ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡಲಾಗುವುದು. ಕೃಷಿಯೇತರ ಉದ್ದೇಶಗಳಿಗೆ 2005-06ನೇ ಸಾಲಿನವರೆಗೆ ಒದಗಿಸಲಾದ ಸಾಲದ ಬಾಕಿ ಅಸಲನ್ನು ಒಂದು ವರ್ಷದೊಳಗಾಗಿ ಮರುಪಾವತಿ ಮಾಡಿದಲ್ಲಿ, ಬಡ್ಡಿಯನ್ನು ಮನ್ನಾ	ಡಾ//ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದವರು ಮಾಹಿತಿ ಒದಗಿಸಬೇಕಾಗಿರುತ್ತದೆ			
	3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳಿಗಾಗಿ ಖರೀದಿಸಲಾಗುವ ಜಮೀನಿನ ಆರ್ಥಿಕ ಮಿತಿಯನ್ನು 5 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗುವುದು.	ಡಾ//ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದವರು ಮಾಹಿತಿ ಒದಗಿಸಬೇಕಾಗಿರುತ್ತದೆ			
	4. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮಕ್ಕಳ ಶಿಕ್ಷಣಕ್ಕೆ ಅಟಲ್ ಬಿಹಾರಿ ವಾಜಪೇಯಿ ಮಾದರಿ ವಸತಿ ಶಾಲೆಯನ್ನು ಪ್ರತಿಯೊಂದು ಕಂದಾಯ ವಿಭಾಗದಲ್ಲಿ ಎರಡರಂತೆ 8 ಶಾಲೆಗಳನ್ನು ಪ್ರತಿ ಶಾಲೆಗೆ 10 ಕೋಟಿ ರೂ.ಗಳ ಅನುದಾನದೊಂದಿಗೆ ಆರಂಭಿಸಲಾಗುವುದು.	ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮಕ್ಕಳ ಶಿಕ್ಷಣಕ್ಕೆ 10 ಅಟಲ್ ಬಿಹಾರಿವಾಜಪೇಯಿ ಮಾದರಿ ವಸತಿ ಶಾಲೆಗಳನ್ನು ತೆರೆಯಲು ಮಂಜೂರಾತಿದೊರೆತಿದ್ದು 2013-14 ನೇ ಸಾಲಿನಲ್ಲಿ ಈ ಶಾಲೆಗಳನ್ನು ತೆರೆಯಲಾಗುವುದು.			

	5. ಸಫಾಯಿ ಕರ್ಮಚಾರಿಗಳ ಸಮಗ್ರ ಅಭಿವೃದ್ಧಿಗಾಗಿ ಸಫಾಯಿ ಕರ್ಮಚಾರಿ ಆಯೋಗ ರಚನೆ ಮಾಡಲಾಗುವುದು.	ಸಫಾಯಿ ಕರ್ಮಚಾರಿ ಆಯೋಗ ರಚನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
	6. ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ನಿಗಮಗಳ ಕಾರ್ಯಕ್ಷಮತೆಯನ್ನು ಉತಮಪಡಿಸಲು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಸಂಬಂಧಿಸಿದ ಸರ್ಕಾರದ ಯೋಜನೆ. ಮತ್ತು ಕಾರ್ಯಕ್ರಮಗಳ ಸಾಮರ್ಥ್ಯವನ್ನು ಹೆಚ್ಚು ಮಾಡವ ಬಗ್ಗೆ ಆರು ತಿಂಗಳೊಳಗೆ ವರದಿ ನೀಡಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗುವುದು.	ಸದರಿ ಸಮಿತಿಯನ್ನು ರಚಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
	7. ಪರಿಶಿಷ್ಟ ಜಾತಿ ಪಂಗಡಗಳ ಅಭಿವೃದ್ಧಿಗೆ ಅನುದಾನ: ಶ್ರೀ ಚಲವಾದಿ, ಶ್ರೀ ಆದಿಜಾಂಬವ, ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಮಾದಾರ ಚೆನ್ನಯ್ಯ, ಶ್ರೀ ಸಿದ್ಧರಾಮೇಶ್ವರ ಸ್ವಾಮಿ ಭೋವಿ, ಶ್ರೀ ಕೇತೇಶ್ವರ ಮೇದಾರ ಇತ್ಯಾದಿ ಸಮುದಾಯಗಳ ಕ್ಷೇಮಾಭಿವೃದ್ಧಿ ಮತ್ತು ಗುರುಪೀಠಗಳ ಶೈಕ್ಷಣಿಕ ಮೂಲಭೂತ ಸೌಕರ್ಯ ಒದಗಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.	ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಆಯುಕ್ತರ ಪರವಾಗಿ

ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಅನುಬಂಧ ಪ್ರಶ್ನೆ ಸಂಖ್ಯೆ: 166 ಕ್ಕೆ

<table>
<tr><th>ವರ್ಷ</th><th colspan="2">ಆಯವ್ಯಯದಲ್ಲಿ ಘೋಷಿಸಿದ್ದ ಹೊಸ ಯೋಜನೆಗಳು</th><th>ಯೋಜನೆಗಳಿಗೆ ಒದಗಿಸಿದ/ ಬಿಡುಗಡೆಯಾದ/ ಖರ್ಚಾದ ಅನುದಾನ 8ಮತ್ತು ಫಲಾನುಭವಿಗಳ ವಿವರ.</th></tr>
<tr><td>2008–09</td><td>1</td><td>ತಲಾ ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ಐದು ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಘೋಷಿಸಲಾಗಿದೆ.</td><td>(ರೂ. ಲಕ್ಷಗಳಲ್ಲಿ)
<table><tr><th>ಕ್ರ ಸಂ</th><th>ಒದಗಿಸಿರುವ ಅನುದಾನ</th><th>ವೆಚ್ಚ</th><th>ಫಲಾನುಭವಿ ಗಳ ಸಂಖ್ಯೆ</th></tr><tr><td>1</td><td>500.00</td><td>500.00</td><td></td></tr></table></td></tr>
<tr><td>2009–10</td><td>1</td><td>ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ 32 ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ತೆರೆಯಲು ಘೋಷಿಸಲಾಗಿದೆ.</td><td>(ರೂ. ಲಕ್ಷಗಳಲ್ಲಿ)
<table><tr><th>ವರ್ಷ</th><th>ನಿಗಧಿ ಪಡಿಸಿದ ಅನುದಾನ</th><th>ಬಿಡುಗಡೆ</th><th>ಖರ್ಚು</th><th>ಫಲಾನುಭವಿಗಳ ಸಂಖ್ಯೆ</th></tr><tr><td>2009–10</td><td>800.00</td><td>800.00</td><td>800.00</td><td>1600</td></tr><tr><td>2010–11</td><td>800.00</td><td>800.00</td><td>800.00</td><td>3200</td></tr><tr><td>2011–12</td><td>800.00</td><td>800.00</td><td>800.00</td><td>4800</td></tr><tr><td>2012–13</td><td>800.00</td><td>800.00</td><td>800.00</td><td>6400</td></tr></table></td></tr>
<tr><td></td><td>2</td><td>ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು 10ನೇ ತರಗತಿಯಲ್ಲಿ ಶೇ.75 ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣುಮಕ್ಕಳಿಗೆ ರೂ. 10,000 ಮತ್ತು ಶೇ. 60 ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣುಮಕ್ಕಳಿಗೆ ರೂ. 5,000 ಪ್ರೋತ್ಸಾಹ ಧನವನ್ನು ನೀಡಲು</td><td>(ರೂ. ಲಕ್ಷಗಳಲ್ಲಿ)
<table><tr><th>ವರ್ಷ</th><th>ಬಿಡುಗಡೆ</th><th>ವಿದ್ಯಾರ್ಥಿಗಳ ಸಂಖ್ಯೆ</th></tr><tr><td>2009–10</td><td>260.00</td><td>8916</td></tr><tr><td>2010–11</td><td>800.00</td><td>6066</td></tr><tr><td>2011–12</td><td>650.00</td><td>11109</td></tr><tr><td>2012–13</td><td>706.50</td><td>11050</td></tr><tr><td>ಒಟ್ಟು</td><td>2416.50</td><td>37141</td></tr></table></td></tr>
</table>

<table>
<tr><td></td><td></td><td>ಘೋಷಿಸಲಾಗಿದೆ.</td><td></td></tr>
<tr><td></td><td>3</td><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಗಳನ್ನು ಅಭಿವೃದ್ಧಿ ಪಡಿಸಲು ರೂ. 100.00 ಕೋಟಿಗಳನ್ನು ಒದಗಿಸಲಾಗುವುದು.</td><td>ಈ ಹೊಸ ಯೋಜನೆಯಲ್ಲಿ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ರೂ.15.00 ಕೋಟಿಗಳನ್ನು ಒದಗಿಸಲಾಗಿದೆ.
(ರೂ. ಲಕ್ಷಗಳಲ್ಲಿ)
<table>
<tr><th>ನಿಗಧಿಪಡಿಸಿದ ಅನುದಾನ</th><th>ಬಿಡುಗಡೆ</th><th>ಖರ್ಚು</th><th>ಕಾಲೋನಿ ಸಂಖ್ಯೆ</th></tr>
<tr><td>1500.00</td><td>1500.00</td><td>1500.00</td><td>510</td></tr>
</table></td></tr>
<tr><td>11–12</td><td>4</td><td>ಬಹಳ ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಅವಶ್ಯಕವಾದ ಮೂಲಭೂತ ಸೌಕರ್ಯಗಳಿಲ್ಲದೆ ಅಲ್ಲಿಯ ಜನ ತೊಂದರೆ ಅನುಭವಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ ಪ್ರಾರಂಭಿಕವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ 300 ಕಾಲೋನಿಗಳ ಅಭಿವೃದ್ಧಿಗಾಗಿ ಪ್ರತಿ ಕಾಲೋನಿಗೆ 1 ಕೋಟಿ ರೂ.ನಂತೆ ಒಟ್ಟು 300 ಕೋಟಿ ರೂ.ಗಳನ್ನು ನೀಡಲಾಗುವುದು.</td><td>ಈ ಹೊಸ ಯೋಜನೆಯಲ್ಲಿ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ರೂ. 24.75 ಕೋಟಿಗಳನ್ನು ಒದಗಿಸಲಾಗಿದೆ.
(ರೂ. ಲಕ್ಷಗಳಲ್ಲಿ)
<table>
<tr><th>ನಿಗಧಿಪಡಿಸಿದ ಅನುದಾನ</th><th>ಬಿಡುಗಡೆ</th><th>ಖರ್ಚು</th><th>ಕಾಲೋನಿ ಸಂಖ್ಯೆ</th></tr>
<tr><td>2475.00</td><td>2475.00</td><td>2475.00</td><td>363</td></tr>
</table></td></tr>
</table>

<table>
<tr>
<td>12–13</td>
<td>1</td>
<td>ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಅನುದಾನ: ಶ್ರೀ ಮಹರ್ಷಿ ವಾಲ್ಮೀಕಿ ಹಾಗು ಶ್ರೀ. ಕೇತೇಶ್ವರ ಮೇದಾರ ಸಮುದಾಯಗಳ ಕ್ಷೇಮಾಭಿವೃದ್ಧಿ ಮತ್ತು ಗುರುಪೀಠಗಳ ಶೈಕ್ಷಣಿಕ ಮೂಲಭೂತ ಸೌಕರ್ಯ ಒದಗಿಸಲು 6 ಕೋಟಿ ರೂ.ಗಳನ್ನು ಒದಗಿಸಲಾಗುವುದು.</td>
<td>(ರೂ. ಲಕ್ಷಗಳಲ್ಲಿ)
<table>
<tr><th>ನಿಗಧಿಪಡಿಸಿದ ಅನುದಾನ</th><th>ಬಿಡುಗಡೆ</th><th>ಖರ್ಚು</th><th>ಕಾಲೋನಿ ಸಂಖ್ಯೆ</th></tr>
<tr><td>600.00</td><td>600.00</td><td>–</td><td>–</td></tr>
</table>
</td>
</tr>
</table>

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಅನುಬಂಧ

ಪ್ರಶ್ನೆ ಸಂಖ್ಯೆ : 166ಕ್ಕೆ

ಕ್ರ. ಸಂ.	ವರ್ಷ	ನಿಗಧಿಪಡಿಸಿರುವ ಅನುದಾನ			ಬಿಡುಗಡೆಯಾಗಿರುವ ಅನುದಾನ			ವೆಚ್ಚವಾಗಿರುವ ಅನುದಾನ		
		ಯೋಜನೆ	ಯೋಜನೇತರ	ಒಟ್ಟು	ಯೋಜನೆ	ಯೋಜನೇತರ	ಒಟ್ಟು	ಯೋಜನೆ	ಯೋಜನೇತರ	ಒಟ್ಟು
1	2008–09	25738.23	3459.85	29198.08	20919.75	3472.73	24392.48	20694.35	3345.10	24039.45
2	2009–10	26400.82	3684.10	30084.92	25142.91	3676.35	28819.26	24573.68	3569.94	28143.62
3	2010–11	45195.24	4063.81	49259.05	44068.46	3995.61	48064.07	41924.67	3776.39	45701.06
4	2011–12	65912.39	4131.22	70043.61	55695.17	4096.29	59791.46	55002.51	3842.18	58844.69
5	2012–13 (ಡಿಸೆಂಬರ್ –12 ರ)	69539.85	5760.65	75300.50	41807.33	4888.62	46695.95	26310.13	2854.88	29165.01

ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿಗೆ ಸಂಬಂಧಿಸಿದಂತೆ
2008-09ನೇ ಸಾಲಿನಿಂದ 31-12-2012ರವರೆಗೆ ಯೋಜನಾವಾರು ಬಿಡುಗಡೆಯಾದ ಅನುದಾನ ಮತ್ತು ಖರ್ಚಿನ ವಿವರಗಳು

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ	2008-09				2009-10				2010-11				2011-12				2012-13 (ಡಿಸೆಂಬರ್ 2012ರವರೆಗೆ)			
		ನಿಗದಿ ಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿ ಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿ ಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ
1	ಸ್ವಯಂ ಉದ್ಯೋಗ	2000.00	1000.00	648.70	13093	2000.00	1000.00	848.61	17448	2000.00	1800.00	918.97	23236	2200.00	2000.00	1830.05	15585	2200.00	1650.00	1084.94	5115
2	ಭೂ ಒಡೆತನ			357.52	869			300.00	936			601.96	985								
3	ಗಂಗಾಕಲ್ಯಾಣ																				
	1) ವೈ.ನಿ.ಕೊ.ಬಾ	4830.00	3415.00	6537.40	5169	4830.00	3330.00	3487.36	5543	5090.00	6090.00	4760.33	6924	5689.00	5689.00	7339.94	6678	6689.00	5016.75	6646.79	4897
	2) ಏತ ನೀರಾವರಿ			260.31	309			256.06	198			2.69				680.46	1002			164.29	258
4	ಷೇರು ಬಂಡವಾಳ																				
	- ರಾಜ್ಯ	510.00	510.00	218.48		510.00	510.00	197.42		510.00	510.00	658.54		561.00	560.50	637.38		561.00	420.75	470.18	
	- ಕೇಂದ್ರ	490.00	252.29	252.29		490.00	490.00	490.00		490.00	-	-		539.00	-	-		539.00	-	-	

ಕ್ರ ಸಂ.	ಯೋಜನೆ	2008-09				2009-10				2010-11				2011-12				2012-13 (ಡಿಸೆಂಬರ್ 2012ರವರೆಗೆ)			
		ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ	ನಿಗದಿಪಡಿಸಿದ ಮೊತ್ತ	ಬಿಡುಗಡೆ	ಖರ್ಚು	ಭೌತಿಕ ಸಾಧನೆ
5	ಮೈಕ್ರೋ ಫೈನಾನ್ಸ್ – ಸಹಾಯಧನ	150.00	97.00	96.97	5199	180.00	100.00	101.62	4065	250.00	250.00	237.73	9509	275.00	275.00	275.00	5500	275.00	206.25	716.54	14330
	ಮೈಕ್ರೋ ಫೈನಾನ್ಸ್ –ಬೀಜಧನ	150.00	150.00	150.00		180.00	180.00	101.62		250.00	250.00	237.73		275.00	273.00	275.00		275.00	206.25	716.54	
	ಒಟ್ಟು	8130.00	5424.29	8521.67	24639	8190.00	5610.00	5782.69	28190	8590.00	8900.00	7417.95	40654	9539.00	8797.50	11037.83	28765	10539.00	7500.00	9799.28	24600

ಅನುಬಂಧ–166
ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ
2009–10 ನೇ ಸಾಲಿನ ಆಯವ್ಯಯ ಹಾಗೂ ಪ್ರಗತಿ

(ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾರ್ಯಕ್ರಮ	ಗುರಿ				ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಭೌತಿಕ ಸಾಧನೆ	ಆಯವ್ಯಯ ಖರ್ಚು (ಸಹಾಯಧನ & ಅಂಚಿನಹಣ)	ಆರ್ಥಿಕ ಸಾಧನೆ		ಶೇಕಡಾವಾರು	
		ಭೌತಿಕ	ಆರ್ಥಿಕ						ಅವಧಿ ಸಾಲ	ಒಟ್ಟು	ಭೌತಿಕ	ಆರ್ಥಿಕ
			ಆಯವ್ಯಯ	ಅವಧಿ ಸಾಲ	ಒಟ್ಟು							
1	ಗಂಗಾ ಕಲ್ಯಾಣ ಯೋಜನೆ	3227	2735.00 .	400.00	3135.00	2735.00	2492	2515.23	366.87	2882.10	78	92
2	ಭೂ ಒಡೆತನ ಯೋಜನೆ	293	200.00	200.00	400.00	146.66	199	99.00	99.00	198.00	68	68
3	ಸ್ವಯಂ ಉದ್ಯೋಗ ಯೋಜನೆ	4033	550.00	0	550.00	403.34	4017	342.95	132.76	475.71	99	85
4	ಮೈಕ್ರೋ ಕ್ರೆಡಿಟ್ (ಕಿರು ಸಾಲ) (ರಾಜ್ಯ ಸರ್ಕಾರ)	1000	50.00	0	50.00	50.00	880	44.00	0	44.00	88	88
5	ಷೇರು ಬಂಡವಾಳ	0	165.00	0	165.00	165.00	0	154.45	0	154.45	0	94
	ಒಟ್ಟು	**8553**	**3700.00**	**600.00**	**4300.00**	**3500.00**	**7588**	**3155.63**	**598.63**	**3754.26**	**89**	**90**
6	ಡಾ: ಡಿ.ಎಂ.ನಂಜುಡಪ್ಪ ವರದಿ ಆಧಾರ ಕೊರೆದ ಕೊಳವೆಬಾವಿಗಳ ವಿದ್ಯುದ್ದೀಕರಣ	0	1390.00	0	1390.00	1040.00	0	1040.00	0	1040.00	0	100
7.	ಗಂಗಾ ಕಲ್ಯಾಣ ಯೋಜನೆ ಕೊಳವೆ ಬಾವಿ ಕೊರೆಯುವಿಕೆ	697	1000.00	0	1000.00	600.00	697	600.00	0	600.00	100	100

ಕ್ರ ಸಂ	ಕಾರ್ಯಕ್ರಮ	ಗುರಿ				ಸರ್ಕಾರದಿಂದ ಬಿಡುಗಡೆಯಾದ ಅನುದಾನ	ಭೌತಿಕ ಸಾಧನೆ	ಆಯವ್ಯಯ ಖರ್ಚು (ಸಹಾಯಧನ & ಅಂಚಿನಹಣ)	ಆರ್ಥಿಕ ಸಾಧನೆ		ಶೇಕಡಾವಾರು	
		ಭೌತಿಕ	ಆರ್ಥಿಕ						ಅವಧಿ ಸಾಲ	ಒಟ್ಟು	ಭೌತಿಕ	ಆರ್ಥಿಕ
			ಆಯವ್ಯಯ	ಅವಧಿ ಸಾಲ	ಒಟ್ಟು							
	ಒಟ್ಟು (6 ರಿಂದ 7 ರವರೆಗೆ)	697	2390.00	0	2390.00	1640.00	697	1640.00	0	1640.00	100	100
	ಒಟ್ಟು (1 ರಿಂದ 7 ರವರೆಗೆ)	9250	6090.00	600.00	6690.00	5140.00	8285	4795.63	598.63	5394.26	90	93

ಷರಾ : ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ನೀಡಲಾದ ಭೌತಿಕ ಗುರಿಯಲ್ಲಿ 317 ಏತ ನೀರಾವರಿ ಘಟಕದ ಫಲಾನುಭವಿಗಳು ಸೇರಿದೆ. ಗಂಗಾ ಕಲ್ಯಾಣ ಯೋಜನೆಯಡಿ ಒಟ್ಟು ವೆಚ್ಚದಲ್ಲಿ ರೂ. 217.88 ಲಕ್ಷಗಳು ಏತ ನೀರಾವರಿ ಯೋಜನೆಯಡಿ ಭರಿಸಲಾಗಿದೆ.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ

2008-9ನೇ ಸಾಲಿನ ಆಯವ್ಯಯ ಹಾಗೂ ಪ್ರಗತಿ ವರದಿ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾರ್ಯಕ್ರಮ	ಗುರಿ				ಸರ್ಕಾರದಿಂದ ಬಿಡುಗಡೆ ಯಾದ ಅನುದಾನ	ಭೌತಿಕ ಸಾಧನೆ	ಆಯವ್ಯಯ ಖರ್ಚು (ಸಹಾಯಧನ & ಅಂಚಿನಹಣ)	ಆರ್ಥಿಕ ಸಾಧನೆ		ಶೇಕಡಾವಾರು	
		ಭೌತಿಕ	ಆರ್ಥಿಕ						ಅವಧಿಸಾಲ	ಒಟ್ಟು	ಭೌತಿಕ	ಆರ್ಥಿಕ
			ಆಯವ್ಯಯ	ಅವಧಿ ಸಾಲ	ಒಟ್ಟು							
1	ಗಂಗಾ ಕಲ್ಯಾಣ ಯೋಜನೆ	4378	3870.00	570.00	4440.00	3402.50	4040	4562.54	452.78	5015.32	92	147
2	ಭೂ ಒಡೆತನ ಯೋಜನೆ	420	210.00	210.00	420.00	157.50	165	58.39	58.39	116.78	39	74
3	ಸ್ವಯಂ ಉದ್ಯೋಗ ಯೋಜನೆ	5470	525.00	0.00	525.00	393.75	4563	348.49	121.25	469.74	83	119
4	ಮೈಕ್ರೋ ಕ್ರೆಡಿಟ್ (ಕಿರು ಸಾಲ) (ರಾಜ್ಯ ಸರ್ಕಾರ)	1400	70.00	0.00	70.00	61.25	1337	66.86	0.00	66.86	96	109
5	ಷೇರು ಬಂಡವಾಳ	0	165.00	0.00	165.00	165.00	0	141.08	0	141.08	0	86
6	ಮೈಕ್ರೋ ಕ್ರೆಡಿಟ್ (ಸ್ವ ಸಹಾಯ ಸಂಘ)	0	0.00	60.00	60.00	0.00	1400	15.00	60.00	75.00	0	0
	ಒಟ್ಟು	**11668**	**4840.00**	**840.00**	**5680.00**	**4180.00**	**1150 5**	**5192.36**	**692.42**	**5884.78**	**99**	**141**
7	ಡಾ: ಡಿ.ಎಂ.ನಂಜುಡಪ್ಪ ವರಧಿ ಆಧಾರ ಕೊರದ ಕೊಳವೆಬಾವಿಗಳ ವಿದ್ಯುದ್ದೀಕರಣ	0	1376.88	0.00	1376.88	1376.88	0	3121.12	0	3121.12	0	227

ಕ್ರ ಸಂ.	ಕಾರ್ಯಕ್ರಮ	ಗುರಿ				ಸರ್ಕಾರದಿಂದ ಬಿಡುಗಡೆ ಯಾದ ಅನುದಾನ	ಭೌತಿಕ ಸಾಧನೆ	ಆಯವ್ಯಯ ಖರ್ಚು (ಸಹಾಯಧನ & ಅಂಚಿನಹಣ)	ಆರ್ಥಿಕ ಸಾಧನೆ		ಶೇಕಡಾವಾರು	
		ಭೌತಿಕ	ಆರ್ಥಿಕ						ಅವಧಿಸಾಲ	ಒಟ್ಟು	ಭೌತಿಕ	ಆರ್ಥಿಕ
			ಆಯವ್ಯಯ	ಅವಧಿ ಸಾಲ	ಒಟ್ಟು							
8	ಗಂಗಾ ಕಲ್ಯಾಣ ಯೋಜನೆ – ಕೊಳವೆಬಾವಿ ಕೊರೆಯುವಿಕೆ	930	800.00	0.00	800.00	800.00	317	272.62	0	272.62	34	34
	ಒಟ್ಟು (7 ರಿಂದ 8 ರವರೆಗೆ)	**930**	**2176.88**	**0.00**	**2176.88**	**2176.88**	**317**	**3393.74**	**0**	**3393.74**	**34**	**156**
	ಒಟ್ಟು (1 ರಿಂದ 8 ರವರೆಗೆ)	**12598**	**7016.88**	**840.00**	**7856.88**	**6356.88**	**11822**	**8586.10**	**692.42**	**9278.52**	**94**	**146**

ಷರಾ : ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ನೀಡಲಾದ ಭೌತಿಕ ಗುರಿಯಲ್ಲಿ 308 ಏತ ನೀರಾವರಿ ಘಟಕದ ಫಲಾನುಭವಿಗಳು ಸೇರಿದೆ. ಗಂಗಾ ಕಲ್ಯಾಣ ಯೋಜನೆಯಡಿ ಒಟ್ಟು ವೆಚ್ಚದಲ್ಲಿ ರೂ. 261.19 ಲಕ್ಷಗಳು ಏತ ನೀರಾವರಿ ಯೋಜನೆಯಡಿ ಭರಿಸಲಾಗಿದೆ.

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಮಂಜೂರಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಬಾಕಿ ಮೊತ್ತ	ಶೇಕಡವಾರು .	
	A- ರಾಜ್ಯ ಸರ್ಕಾರ					ಭೌತಿಕ	ಆರ್ಥಿಕ			ಆರ್ಥಿಕ	ಭೌತಿಕ
	I - ಸ್ವಯಂ ಉದ್ಯೋಗ ಯೋಜನೆ 2225-02-190-2-01										
	1. ಸ್ವಯಂ ಉದ್ಯೋಗ ಯೋಜನೆ	220.00	220.00	257.40	2500			2574			
	2. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ	30.00	30.00	18.37	300	3500	350.00	284		100	87
	3. ನೇರಸಾಲ	100.00	100.00	27.50	700			657			
	ಭೂ ಒಡೆತನ ಯೋಜನೆ 2225-02-190-2-01	150.00	150.00	140.00	200	200	150.00	189		95	93
	ಒಟ್ಟು – I	**500.00**	**500.00**	**443.27**	**3700**	**3700**	**500,00**	**3704**	**56,73**	**100**	**89**
	II. ಗಂಗಾ ಕಲ್ಯಾಣ ಯೋಜನೆ 2225-02-800-0-02										
	1. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	2800.00	2800.00	2746.16	3157	3157	2800.00	3880		123	98
	2. ಏತ ನೀರಾವರಿ ಯೋಜನೆ	300.00	300.00	356.53	405	405	300.00	426		105	119
	ಒಟ್ಟು–II	**3100.00**	**3100.00**	**3106.69**	**3562**	**3562**	**3100.00**	**4306**	**0.00**	**121**	**100**

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಮಂಜೂರಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಬಾಕಿ ಮೊತ್ತ	ಶೇಕಡವಾರು	
						ಭೌತಿಕ	ಆರ್ಥಿಕ			ಆರ್ಥಿಕ	ಭೌತಿಕ
	III ಷೇರು ಬಂಡವಾಳ ಹೂಡಿಕೆ 4225-02-190-1-01	200.00	200.00	242.00	0	0	200.00	0		0	121
	ಒಟ್ಟು-III	200.00	200.00	242.00	0	0	200.00	0	0.00	0	121
	IV ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ (ಅಂಚಿನ ಹಣ)	50.00	50.00	56.20	2000	2000	50.00	2248		112	112
	4225-02-190-1-02										
	ಒಟ್ಟು IV	50.00	50.00	56.20	2000	2000	50.00	2248	0.00	112	112
	V ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ (ಸಹಾಯಧನ)	50.00	50.00	56.20			50.00				112
	2225-02-19-2-07										
	ಒಟ್ಟು	50.00	50.00	56.20	0	0	50.00	0			112
	ಒಟ್ಟು – A (1+2+3+4+5)	**3900.00**	**3900.00**	**3900.36**	**9262**	**9262**	**3900.00**	**10258**	**56.73**	**111**	**100**

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಮಂಜೂರಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಬಾಕಿ ಮೊತ್ತ	ಶೇಕಡವಾರು	
						ಭೌತಿಕ	ಅರ್ಥಿಕ			ಆರ್ಥಿಕ	ಭೌತಿಕ
B	ಕ್ರೋಢೀಕೃತ ಅನುದಾನ (ವಿಶೇಷ ಅಭಿವೃದ್ಧಿ ಯೋಜನೆ)										
	2225–02–283–02										
	1. ಡಾ: ಡಿ. ಎಂ ನಂಜುಂಡಪ್ಪ ನವರ ವರದಿ ಆಧಾರದಂತೆ ಹಿಂದುಳಿದ ತಾಲ್ಲೂಕುಗಳಲ್ಲಿ ಕೊರೆದ ಕೊಳೆವೆಬಾವಿಗಳ ವಿದ್ಯುದ್ದೀಕರಣ	2000.00	2000.00	1300.00			2000.00			0	65
	2. ಹಿಂದುಳಿದ ತಾಲ್ಲೂಕುಗಳಲ್ಲಿ ಕೊಳೆವೆಬಾವಿ ಕೊರೆಯುವಿಕೆ	700.00	700.00	700.00	814	814	700.00	814		100	100
	ಒಟ್ಟು B(1+2)	2700.00	2700.00	2000.00	814	814	2700.00	814		100	74
	ಒಟ್ಟು (A+B)	6600.00	6600.00	5900.36	10076	10076	6600.00	11072	699.64	110	89
C	ಕೇಂದ್ರ ಸರ್ಕಾರ										
	I ಷೇರು ಬಂಡವಾಳ ಹೂಡಿಕೆ	193.00	0.00	0.00	0	0	0	0		0	0
	42225–02–190–1–01										
	ಒಟ್ಟು (A+B+C)	**6793.00**	**68.00**	**5900.36**	**10076**	**10076**	**6600.00**	**11072**	**0**	**110**	**89**

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಮಂಜೂರಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಬಾಕಿ ಮೊತ್ತ	ಶೇಕಡವಾರು	
						ಭೌತಿಕ	ಆರ್ಥಿಕ			ಆರ್ಥಿಕ	ಭೌತಿಕ
D	**NSTFDC ಅವಧಿಸಾಲ**										
	ಅ). ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	471.00	649.28	277.12	0	0	649.28	0	372.16	0	0
	ಆ). ಭೂ ಒಡೆತನ ಯೋಜನೆ	150.00	0.00	140.00	0	0	0.00	0	0.00	0	0
	ಇ). ನೇರಸಾಲ ಯೋಜನೆ	1110.00	349.90	380.68	0	0	349.90	0	0.00	0	0
	ಒಟ್ಟು D	**1731.00**	**999.18**	**797.80**	**0**	**0**	**999.18**	**0**	**372.16**	**0**	**0**
	ಒಟ್ಟು (A+B+C+D)	**8524.00**	**7599.18**	**6698.16**	**10076**	**10076**	**7599.18**	**11072**	**1071.80**	**110**	**88**

ಟಿಪ್ಪಣಿ :

1. 2010-11 ನೇ ಸಾಲಿನ ಮಾರ್ಚ್-2011 ಅಂತ್ಯದ ವರೆಗೆ 2967 ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.
2. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ ಪ್ರಗತಿಯನ್ನು ಹಿಂಬಾಕಿ ಹಣದಿಂದ ಪ್ರಗತಿಸಾದಿಸಿದೆ.
3. ಭೂ ಒಡೆತನ ಯೋಜನೆಯಡಿ ಒಟ್ಟು 189 ಫಲಾನುಭವಿಗಳಿಗೆ ಒಟ್ಟು 222 ಎಕರೆ ಕೃಷಿ ಜಮೀನ್ನನು ಹಾಗೂ ಒಟ್ಟು 78 ಎಕರೆ ತಿರಿ ಜಮೀನನ್ನು ಮಂಜೂರಾತಿ ನೀಡಿದೆ.
4. ಷೇರು ಬಂಡವಾಳದಲ್ಲಿ ಬಿಡುಗಡೆಯಾದ ಮೊತ್ತವನ್ನು ಉದ್ಯಮ ಶೀಲತಾ ಅಬಿವೃದ್ಧಿ ಯೋಜನೆ ಹಾಗೂ ನೇರಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲು ಅಚಿಚಿನ ಹಣ ರೂಪದಲ್ಲಿ ವಿನಿಯೋಗಿಸಲಾಗಿದೆ. ಷೇರು ಬಂಡವಾಳ ಹೂಡಿಕೆಯಲ್ಲಿ ಹೆಚ್ಚುವರಿ ವೆಚ್ಚ ಮಾಡಲಾಗಿದ್ದು, ಇದನ್ನು ಹಿಂಬಾಕಿ ಹಣದಿಂದ ಭರಿಸಲಾಗಿದೆ.
5. ರಾಷ್ಟ್ರೀಯ ನಿಗಮದಿಂದ ರೂ. 1731.00 ಲಕ್ಷ ನಿರೀಕ್ಷಿಸಿದ್ದು, ರಾಜ್ಯ ಸರ್ಕಾರ ರೂ. 1000.00 ಲಕ್ಷಕ್ಕೆ ಸರ್ಕಾರಿ ಖಾತರಿ ನೀಡಿದ್ದರಿಂದ ರೂ. 731.82. ಲಕ್ಷ ಕಡಿತವಾಗಿದೆ.

ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ										
2011-12 ನೇ ಸಾಲಿನ ಆಯವ್ಯಯ ಮತ್ತು ಪ್ರಗತಿ ವಿವರ (ದಿನಾಂಕ: 01.04.2011 ರಿಂದ 31.03.2012)										
(ರೂ.ಲಕ್ಷಗಳಲ್ಲಿ)										
ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯ ವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ಭೌತಿಕ ಸಾಧನೆ	ಶೇಕಡವಾರು	
	A- ರಾಜ್ಯ ಸರ್ಕಾರ								ಆರ್ಥಿಕ	ಭೌತಿಕ
	I - ಸ್ವಯಂ ಉದ್ಯೋಗ ಯೋಜನೆ 2225-02-190-2-01									
	1. ಸ್ವಯಂ ಉದ್ಯೋಗ ಯೋಜನೆ	265.00	0.00	265.00	265.00	282.74	1060	1130	0	0
	2. ಉದ್ಯಮ ಶೀಲತಾ ಅಬಿವೃದ್ಧಿ ಯೋಜನೆ	10.00	0.00	10.00	10.00	38.55	200	216	98	95
	3. ನೇರಸಾಲ	75.00	0.00	75.00	75.00	20.89	430	261	0	0
	ಭೂ ಒಡೆತನ ಯೋಜನೆ 2225-02-190-2-01	150.00	0.00	150.00	150.00	121.28	120	123	81	100
	ಒಟ್ಟು - I	**500.00**	**0.00**	**500.00**	**500.00**	**463.46**	**1810**	**1730**	**93**	**96**
	II ಗಂಗಾ ಕಲ್ಯಾಣ ಯೋಜನೆ 2225-02-800-0-02									
	1. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	3200.00	0.00	3200.00	3200.00	2880.18	3200	2585	90	81

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯ ವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC ಅವಧಿಸಾಲ / ಹಿಂಬಾಕಿ	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ಭೌತಿಕ ಸಾಧನೆ	ಶೇಕಡವಾರು	
									ಆರ್ಥಿಕ	ಭೌತಿಕ
	2. ಏತ ನೀರಾವರಿ ಯೋಜನೆ	300.00	0.00	300.00	300.00	678.96	405	1033	100	100
	ಒಟ್ಟು-II	**3500.00**	**0.00**	**3500.00**	**3500.00**	**3559.14**	**3605**	**3618**	**100**	**100**
	III ಷೇರು ಬಂಡವಾಳ ಹೂಡಿಕೆ 4225-02-190-1-01	-200.00	0.00	200.00	200.00	162.70	0	0	81	0
	ಒಟ್ಟು-III	**200.00**	**0.00**	**200.00**	**200.00**	**162.70**	**0**	**0**	**81**	**0**
	IV ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ (ಅಂಚಿನ ಹಣ)	50.00	0.00	50.00	50.00	50.00	1000	1000	100	100
	4225-02-190-1-02			0.00					0	0
	ಒಟ್ಟು IV	**50.00**	0.00	50.00	50.00	50.00	1000	1000	100	100
	V ಮೈಕ್ರೋಕ್ರೆಡಿಟ್ (ಕಿರುಸಾಲ) ಯೋಜನೆ (ಸಹಾಯಧನ)	50.00	0.00	50.00	50.00	50.00	0	0	100	0
	2225-02-190-2-07			0.00					0	0
	ಒಟ್ಟು	**50.00**	**0.00**	**50.00**	**50.00**	**50.00**	**0**	**0**	**100**	**0**
	ಒಟ್ಟು	**4300.00**	**0.00**	**4300.00**	**4300.00**	**4285.30**	**6415**	**6348**	**100**	**100**

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶೀರ್ಷಿಕೆ	ಆಯ ವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ಭೌತಿಕ ಸಾಧನೆ	ಶೇಕಡವಾರು	
B	ಕ್ರೋಡೀಕೃತ ಅನುದಾನ (ವಿಶೇಷ ಅಭಿವೃದ್ಧಿ ಯೋಜನೆ)								ಆರ್ಥಿಕ	ಭೌತಿಕ
	2225–02–283–0–02									
	1. ಡಾ: ಡಿ. ಎಂ. ನಂಜುಂಡಪ್ಪನವರ ವರದಿ ಆಧಾರದಂತೆ ಹಿಂದುಳಿದ ತಾಲ್ಲೂಕುಗಳಲಲ್ಲಿ ಕೊರೆದ ಕೊಳವೆಬಾವಿಗಳ ವಿದ್ಯುದ್ದೀಕರಣ	2000.00	0.00	2000.00	2000.00	2800.00	0	0	140	0
	2. ಹಿಂದುಳಿದ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆಯುವಿಕೆ	1000.00	0.00	1000.00	1000.00	1000	1000	1000	100	100
	3. ಭೂ ಒಡೆತನ ಯೋಜನೆಯಡಿ (ವಿಶೇಷ ಅಬಿವೃದ್ಧಿ ಯೋಜನೆ)	500.00	0.00	500.00	500.00	0.00	400	0	0	0
	ಒಟ್ಟು	3500.00	0.00	3500.00	3500.00	3800.00	1400	1000	109	71
	ಒಟ್ಟು (A+B)	7800.00	0.00	7800.00	7800.00	8085.30	7815	7348	100	100

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶೀರ್ಷಿಕೆ	ಆಯ ವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ಭೌತಿಕ ಸಾಧನೆ	ಶೇಕಡವಾರು	
									ಆರ್ಥಿಕ	ಭೌತಿಕ
C	ಕೇಂದ್ರ ಸರ್ಕಾರ									
	I ಷೇರು ಬಂಡವಾಳ ಹೂಡಿಕೆ 42225-02-190-1-01	0.00	193.00	193.00	0.00	0.00	0	0	0	0
	ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ನೆರವು (SCA to TSP)			0.00						
	II ನೀರಾವರಿ ಕಾರ್ಯಕ್ರಮಗಳು 225-02-794-0-01	0.00	200.00	200.00	200.00	0.00	0	0	0	0
	III ಪಶು ಸಂಗೋಪನಾ ಚಟುವಟಿಕೆಗಳು 2225-02-794-0-01	0.00	700.00	700.00	700.00	0.00	0	0	0	0
	IV ಸ್ವಸಹಾಯ ಸಂಘಗಳಿಗೆ ಸಹಾಯಧನ ನೆರವು	0.00	300.00	300.00	300.00	0.00	0	0	0	0
	ಒಟ್ಟು	**0.00**	**1393.00**	**1393.00**	**1200.00**	**0.00**	**0**	**0**	**0**	**0**

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶೀರ್ಷಿಕೆ	ಆಯ ವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ಭೌತಿಕ ಸಾಧನೆ	ಶೇಕಡವಾರು	
									ಆರ್ಥಿಕ	ಭೌತಿಕ
	ಒಟ್ಟು	7800.00	1393.00	9193.00	9000.00	8085.30	7815	7348	90	94
D	**NSTFDC ಅವಧಿಸಾಲ**									
	ಅ). ವೈಯಕ್ತಿಕ ನೀರಾವರಿ ಕೊಳವೆಬಾಯಿ ಯೋಜನೆ	0.00	2100.00	2100.00	1250.00	168.24	0	0	0	0
	ಆ). ಭೂ ಒಡೆತನ ಯೋಜನೆ	0.00	850.00	850.00	0.00	121.98	0	0	0	0
	ಇ). ನೇರಸಾಲ	0.00	500.00	500.00	225.00	95.02	0	0	0	0
	ಒಟ್ಟು	**0.00**	**3450.00**	**3450.00**	**1475.00**	**385.24**	**0**	**0**	**0**	**0**
	ಒಟ್ಟು	**7800.00**	**4843**	**12643.00**	**10475.00**	**8470.54**	**7815**	**7348**	**81**	**94**

ಟಿಪ್ಪಣಿ :

1. ವೈಯಕ್ತಿಕ ನೀರಾವರಿ ಕೊಳವೆಬಾಯಿ ಯೋಜನೆ ಮತ್ತು ಏತ ನೀರಾವರಿ ಯೋಜನೆಯ ಪ್ರಗತಿಯನ್ನು 2010-11 ನೇ ಸಾಲಿನ ಹಿಂಬಾಕಿ ಹಣದಿಂದ ಸಾಧಿಸಿದೆ
2. ಮಾರ್ಚ್ – 2012ರ ಅಂತ್ಯಕ್ಕೆ 3575 ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.
3. ಭೂ ಒಡೆತನ ಯೋಜನೆಯಡಿ ಒಟ್ಟು 123 ಫಲಾನುಭವಿಗಳಿಗೆ ಒಟ್ಟು 184 ಎಕರೆ ಖುಷ್ಕಿ ಜಮೀನನ್ನು ಹಾಗೂ 31 ಎಕರೆ ಜಮೀನನ್ನು ಮಂಜೂರಾತಿ ನೀಡಿದೆ.

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
A - ರಾಜ್ಯ ಸರ್ಕಾರ												
	I - ಸ್ವಯಂ ಉದ್ಯೋಗ ಯೋಜನೆ 2225–02–190–2–01	600.00	0.00	600.00	300.00	426.30	2400	1200	300.00	1705	100	100
	II - ಗಂಗಾ ಕಲ್ಯಾಣ ಯೋಜನೆ 2225–02–102–0–04											
	1. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	3700.00	0.00	3700.00	2000.00	3646.19	3700	0	0.00	3232		
	2. ಏತ ನೀರಾವರಿ ಯೋಜನೆ	300.00	0.00	300.00	0.00	155.25	418	130	97.50	0	159	
	ಒಟ್ಟು – II	**4000.00**	**0.00**	**4000.00**	**2000.00**	**3801.44**	**4118**	**130**	**97.50**	**3232**	**100**	

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
	III. ಷೇರು ಬಂಡವಾಳ ಹೂಡಿಕೆ 4225-02-190-01-01 ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ	200.00	193.00	393.00	100.00	146.15	333	165	99.99	244	100	148
	ಒಟ್ಟು – III	**200.00**	**193.00**	**393.00**	**100.00**	**146.15**	**333**	**165**	**99.99**	**244**	**100**	**148**
	IV. ಮೈಕ್ರೋ ಕ್ರೆಡಿಟ್ (ಕಿರುಸಾಲ) ಯೋಜನೆ (ಅಂಚಿನ ಹಣ) 4225-02-190-1-02	100	0.00	100.00	50.00	89.10	**2000**	**999**	**99.90**	**1782**	**178**	**178**
	V. ಮೈಕ್ರೋ ಕ್ರೆಡಿಟ್(ಕಿರುಸಾಲ) ಯೋಜನೆ (ಸಹಾಯಧನ) 2225-02-190-2-07	100	0.00	100.00	50.00	89.10						
	ಒಟ್ಟು	200.00	0.00	200.00	100.00	178.20	2000	999	99.90	1782	100	178
	(ಆಯವ್ಯಯ) ಒಟ್ಟು	5000.00	193.00	5193.00	2500.00	4552.09	8851	2494	597.39	6963	100	279

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
B	ಕ್ರೋಡೀಕೃತ ಅನುದಾನ (ವಿಶೇಷ ಅಬಿವೃದ್ದಿ ಯೋಜನೆ)											
	2225-02-283-0-02											
	1. ಡಾ: ಡಿ. ಎಂ. ನಂಜುಂಡಪ್ಪನವರ ವರದಿ ಆಧಾರದಂತೆ ಹಿಂದುಳಿದ ತಾಲ್ಲೂಕುಗಳಲ್ಲಿ ಕೊರೆದ ಕೊಳವೆಬಾವಿಗಳ ವಿದ್ಯುದ್ದೀಕರಣ	2000.00	0.00	2000.00	1000.00	1000.00	0	0	999.00	0	100	-
	2. ಹಿಂದುಳಿದ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆಯುವಿಕೆ	1000.00	0.00	1000.00	500.00	0.00	0.00	99	498.00	0	0	-
	3. ಭೂ ಒಡೆತನ ಯೋಜನೆಯಡಿ (ವಿಶೇಷ ಅಭಿವೃದ್ಧಿ ಯೋಜನೆ)	500.00	0.00	500.00	200.00	220.24	220.24	1998	249.00	192	88	194

ಕ್ರ. ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗದಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
	4.ಸ್ವಯಂ ಉದ್ಯೋಗ ಯೋಜನೆ	1000.00	0.00	1000.00	500.00	500.00	4000	1998	499.50	2000	100	100
	5.ಸ್ವಸಹಾಯ ಸಂಘಗಳಿಗೆ ಸಹಾಯ	1000.00	0.00	1000.00	500.00	0.00	1000	4980	249.00	0	–	–
	ಒಟ್ಟು	5500.00	0.00	5500.00	2700.00	1720.24	15100	7575	2495.00	2192	69	29
	ಕ್ರೂಢೀಕೃತ + ಆಯವ್ಯಯ ಅನುದಾನ) ಒಟ್ಟು (A+B)	**10500.00**	**193.00**	**10693.00**	**5200.00**	**6272.33**	**23951**	**10069**	**3092.88**	**9155**	**100**	**91**

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
C	ಹಿಂಬಾಕಿ (ಹಿಂದಿನ ಸಾಲುಗಳಲ್ಲಿ ಬಿಡುಗಡೆಯಾಗಿದ್ದು, ಗುರಿ ಹಂಚಿಕೆಯಾಗದೇ ಇರುವ ಅನುದಾನ)											
	1. ಭೂ ಒಡೆತನ ಯೋಜನೆ	0.00	1000.00	1000.00	0.00	0.00	200	0	0.00	0	–	–
	2. ತರಬೇತಿ ಕಾರ್ಯಕ್ರಮ	0.00	200.00	200.00	0.00	0.00	2000	0	0.00	0	–	–
	3. ಷೇರು ಬಂಡವಾಳ	0.00	610.00	610.00	0.00	0.00	6100	0	0.00	0	–	–
ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ನೆರವು (SCA to TSP) 2011-12												
	1. ನೀರಾವರಿ ಕಾರ್ಯಕ್ರಮಗಳು 2225-02-794-0-01	0.00	200.00	200.00	0.00	0.00	0	0	0.00	0	–	–

ಕ್ರ ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
	2. ಪಶು ಸಂಗೋಪನಾ ಚಟುವಟಿಕೆಗಳು 2225-02-794-0-01	0.00	700.00	700.00	0.00	0.00	2800	0	0.00	0	–	–
	3. ಸ್ವಸಹಾಯ ಸಂಘಗಳಿಗೆ ಸಹಾಯಧನ ನೆರವು	0.00	300.00	300.00	0.00	0.00	3000	0	0.00	0	–	–
	(ಹಿಂಬಾಕಿ ಹಣದ) ಒಟ್ಟು	0.00	3010.00	3010	0.00	0.00	14100	0	0.00	0	–	–
	(ಕ್ರೂಢೀಕೃತ + ಅಯವ್ಯಯ + ಹಿಂಬಾಕಿ ಅನುದಾನ) ಒಟ್ಟು	10500.00	3203.00	13703.00	5200.00	6272.33	38051	10069	3092.88	9155	100	91
D	NSTFDC ಅವಧಿಸಾಲ								0.00			
	ಅ.) ವೈಯಕ್ತಿಕ ನೀರಾವರಿ ಕೊಳವೆಬಾಯಿ ಯೋಜನೆ	0.00	1500.00	1500.00	0.00	0.00	0	0	0.00	0	–	–

ಕ್ರ. ಸಂ	ಯೋಜನೆ ಮತ್ತು ಲೆಕ್ಕ ಶಿರ್ಷಿಕೆ	ಆಯವ್ಯಯ	ಕೇಂದ್ರದ ಷೇರು ಬಂಡವಾಳ/ SCA to TSP/ NSTFDC	ಒಟ್ಟು	ಬಿಡುಗಡೆ ಯಾದ ಮೊತ್ತ	ವೆಚ್ಚ	ವಾರ್ಷಿಕ ಭೌತಿಕ ಗುರಿ	ದಿನಾಂಕ 31.12.2012 ರವರೆಗೆ ನಿಗಧಿಪಡಿಸಿರುವ ಗುರಿ		ಭೌತಿಕ ಸಾಧನೆ	ಶೇಕಡವಾರು	
								ಭೌತಿಕ	ಆರ್ಥಿಕ		ಆರ್ಥಿಕ	ಭೌತಿಕ
	ಆ.) ಭೂ ಒಡೆತನ ಯೋಜನೆ	0.00	500.00	500.00	0.00	207.50	0	0	0.00	0	–	–
	ಇ.) ನೇರಸಾಲ	0.00	0.00	0.00	0.00	136.87	0	0	0.00	0	–	–
	(NSTFDC ಸಾಲ) ಒಟ್ಟು	0.00	2000.00	2000.00	0.00	344.37	0	0	0.00	0.00	–	–
	(ಕ್ರೋಢೀಕೃತ + ಆಯವ್ಯಯ + ಹಿಂಬಾಕಿ ಅನುದಾನ+ NSTFDC ಸಾಲ) ಒಟ್ಟು	10500.00	5203.00	15703.00	5200.00	6616.70	38051	10069	3092.88	9155	100	91

ಟಿಪ್ಪಣಿ :

1. ವೈಯಕ್ತಿಕ ನೀರಾವರಿ ಕೊಳವೆಬಾಯಿ ಯೋಜನೆ ಮತ್ತು ಏತ ನೀರಾವರಿ ಯೋಜನೆಯ ಪ್ರಗತಿಯನ್ನು 2011–12 ನೇ ಸಾಲಿನ ಹಿಂಬಾಕಿ ಹಣದಿಂದ ಪ್ರಗತಿ ಸಾಧಿಸಿದೆ
2. ಡಿಸೆಂಬರ್– 2012ರ ಅಂತ್ಯಕ್ಕೆ 3175 ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.
3. ಭೂ ಒಡೆತನ ಯೋಜನೆಯಡಿ ಹಿಂಬಾಕಿ ಹಣ ಸೇರಿ ಒಟ್ಟು 192 ಫಲಾನುಭವಿಗಳಿಗೆ ಒಟ್ಟು 125.03 ಎಕರೆ ಕೃಷಿ ಜಮೀನನ್ನು ಹಾಗೂ 112.50 ಎಕರೆ ಜಮೀನನ್ನು ಮಂಜೂರಾತಿ ನೀಡಿದೆ.
4. ಹಿಂಬಾಕಿ ಹಣದಿಂದ ಹೆಚ್ಚುವರಿ ಪ್ರಗತಿ ಸಾಧಿಸಲಾಗಿದೆ.

ಪಡಿತರ ವಿತರಣೆ

63 : (181)

ಶ್ರೀ ಹ್ಯಾರೀಸ್ ಎನ್. ಎ (ಶಾಂತಿನಗರ)

ಅ) ಪಡಿತರ ವಿತರಣೆಯಲ್ಲಿ ಅಕ್ರಮವನ್ನು ತಡೆಯಲು ಸರ್ಕಾರದವರು ಜಾರಿಗೊಳಿಸಿದ ಬಯೋ ಮೆಟ್ರಿಕ್ ಪದ್ದತಿಯ ವಿವರಗಳೇನು? ಆ ಪದ್ದತಿಯ ಮೂಲಕ ಎಷ್ಟು ಜನರಿಗೆ ಪಡಿತರ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಆ) ಬಯೋಮೆಟ್ರಿಕ್ ಕಾರ್ಡ್ ವಿತರಣೆಯಲ್ಲಿಯೂ ಅವ್ಯವಹಾರ ನಡೆದಿರುವುದು ನಿಜವೇ? ಹೌದಾದಲ್ಲಿ, ಆ ಕುರಿತು ಸರ್ಕಾರದ ಎಚ್ಚರಿಕೆಯ ಕ್ರಮಗಳೇನು? ಬಯೋಮೆಟ್ರಿಕ್ ಪದ್ಧತಿಯಲ್ಲೂ ಇಂತಹ ಅವ್ಯವಹಾರಗಳು ನಡೆಯಲು ಕಾರಣಗಳನ್ನು ಗುರುತಿಸಲಾಗಿದೆಯೇ (ವಿವರ ಒದಗಿಸುವುದು).

ಇ) ಸ್ತ್ರೀ ಶಕ್ತಿ ಸಂಘಗಳ ಮೂಲಕ ಪಡಿತರ ಹಂಚಿಕೆಯನ್ನು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆ?

ಶ್ರೀ ಐ. ಎನ್. ಜೀವರಾಜ್ (ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) 2011ನೇ ಸಾಲಿನ ನವೆಂಬರ್ ತಿಂಗಳಿನಿಂದ ಇಲಾಖೆಯು "ಆನ್‌ಲೈನ್" ಆಗಿ ಸ್ವೀಕರಿಸಿದ ಅರ್ಜಿಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಅರ್ಜಿದಾರ ಕುಂಟುಂಬದ ಬೆರಳಚ್ಚು ಬಯೋಮೆಟ್ರಿಕ್‌ಗಳನ್ನು ಸಂಬಂಧಿಸಿದ ಪಂಚಾಯತ್ ಕಛೇರಿಗಳಲ್ಲಿಯೂ, ನಗರ ಪ್ರದೇಶಗಳಲ್ಲಿ, ಪ್ರಾಧಿಕಾರ ನೀಡಿದ್ದ ಫೋಟೋ-ಬಯೋ ಸೇವಾ ಕೇಂದ್ರಗಳಲ್ಲಿಯೂ ಸಂಗ್ರಹಿಸಲಾಗಿರುತ್ತದೆ. ಅನುಮೋದನೆಗೊಂಡ 12,44,925 ಹೊಸ ಆನ್‌ಲೈನ್ ಅರ್ಜಿಗಳಿಗೆ ಸಂಬಂಧಿಸಿದಂತೆ, ಕುಟುಂಬಗಳ ಸದಸ್ಯರ ಬಯೋಮೆಟ್ರಿಕ್‌ಗಳನ್ನು ಈ ರೀತಿ ಸಂಗ್ರಹಿಸಿ, ದಿನಾಂಕ 5.2.2013ರವರೆಗೆ 8,17,458 ಪಡಿತರ ಚೀಟಿಗಳನ್ನು ನೀಡಲಾಗಿರುತ್ತದೆ ಹಾಗೂ 3,78,814 ಪಡಿತರ ಚೀಟಿಗಳು ನೀಡಲು ಸಿದ್ದವಾಗಿರುತ್ತದೆ. ಈ ಹಿಂದೆ ಖಾಸಗಿ ಕಂಪನಿಯು ನೀಡಿದ್ದ 44,07,950 ತಾತ್ಕಾಲಿಕ ಪಡಿತರ ಚೀಟಿದಾರ ಕುಂಟುಂಬಗಳ ಬೆರಳಚ್ಚು ಬಯೋಮೆಟ್ರಿಕ್‌ಗಳನ್ನು ಸಹ ಈ ಮೇಲೆ ಹೇಳಿದ ರೀತಿಯಲ್ಲಿ

ಸಂಗ್ರಹಿಸಲಾಗಿರುತ್ತದೆ. ಅದರ ಪೈಕಿ 21,27,727 ಪಡಿತರ ಚೀಟಿಗಳನ್ನು ನೀಡಲಾಗಿರುತ್ತದೆ.

ಆ) 'ಆನ್‌ಲೈನ್' ಆಗಿ ಸ್ವೀಕರಿಸಲ್ಪಟ್ಟ ಪಡಿತರ ಚೀಟಿ ವಿತರಣೆಯಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ. ಈ ಹಿಂದೆ ಖಾಸಗಿ ಸಂಸ್ಥೆಯು ನೀಡಿದ್ದ ತಾತ್ಕಾಲಿಕ ಪಡಿತರ ಚೀಟಿಗಳಿಗೆ ಸಂಬಂಧಿಸಿದಂತೆ, ಕಾನೂನು ಬಾಹಿರವಾಗಿ ಅಂತಹ ಪಡಿತರ ಚೀಟಿಗಳನ್ನು ಹೊಂದಿದ ಕೆಲವು ನ್ಯಾಯಬೆಲೆ ಅಂಗಡಿಯವರು, ಬೇರೆಯವರ ಬೆರಳಚ್ಚು ಜೀವಮಾಪಕ ನೀಡಿ ಖಾಯಂ ಪಡಿತರ ಚೀಟಿ ಪಡೆಯಲು ಪ್ರಯತ್ನಿಸಿರುತ್ತಾರೆ. ವಿಷಯ ತಿಳಿದು ಬಂದಾಗ, ಪಡಿತರ ಚೀಟಿ ನೀಡುವ ಮೊದಲೆ ಅವುಗಳನ್ನು ರದ್ದುಪಡಿಸಲಾಗಿರುತ್ತದೆ. ಸಂಬಂಧಿಸಿದ ಸೇವಾ ಕೇಂದ್ರವನ್ನು ರದ್ದು ಪಡಿಸಲಾಗಿದೆ ಮತ್ತು ಆಹಾರ ನಿರೀಕ್ಷಕರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲಾಗಿದೆ. ಒಂದು ಪಕ್ಷ ಪಡಿತರ ಚೀಟಿ ಮುದ್ರಣ ಆಗಿದ್ದರೂ, ಅವುಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಭಾವಚಿತ್ರದಲ್ಲಿ ಇರುವ ವ್ಯಕ್ತಿ ಎಡಗೈ ಹೆಬ್ಬೆರಳನ್ನು ಬಯೋಮೆಟ್ರಿಕ್ ಸಾಧನದ ಮೇಲೆ ಇಡಬೇಕಾಗುತ್ತದೆ. ಹೊಂದಾಣಿಕೆಯಾದಾಗ ಮಾತ್ರ ಕಂಪ್ಯೂಟರ್ ಪರದೆಯ ಮೇಲೆ ಫಲಾನುಭವಿಯ ಭಾವಚಿತ್ರ ಮೂಡಿಬರುತ್ತದೆ. ಆ ಹಂತದಲ್ಲಿ ಮೋಸ ಬಯಲಾಗಿ, ನಿರಾಕರಿಸಲ್ಪಡುತ್ತಿತ್ತು. ಒಟ್ಟಿನಲ್ಲಿ ವ್ಯವಸ್ಥೆಯಲ್ಲಿ ಸಾಕಷ್ಟು ಎಚ್ಚರಿಕೆಯ ಕ್ರಮಗಳು ಇದ್ದುದರಿಂದ ಕಾನೂನು ಬಾಹಿರವಾಗಿ ಖಾಯಂ ಪಡಿತರಚೀಟಿ ನೀಡದಂತೆ ಕ್ರಮ ವಹಿಸಲಾಗಿದೆ.

ಇ) ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ಪಡಿತರ ಪದ್ಧತಿ) ನಿಯಂತ್ರಣ ಆದೇಶ, 1992 ರ ಕಂಡಿಕೆ 6 ರಲ್ಲಿ ನ್ಯಾಯಬೆಲೆ ಪ್ರಾಧಿಕಾರ ಮಂಜೂರು ಮಾಡುವಲ್ಲಿ ನೀಡಬೇಕಾದ ಆದ್ಯತೆಗಳನ್ನು ಪಟ್ಟಿ ಮಾಡಲಾಗಿರುತ್ತದೆ. ಅದರ ಭಾಗ (ಬಿ) ಯಲ್ಲಿ, ಸ್ತ್ರೀಶಕ್ತಿ ಸಂಘಗಳಿಗೆ ಮೊದಲನೆಯ ಆದ್ಯತೆ ನೀಡಲಾಗಿರುತ್ತದೆ. ಆದಕಾರಣ, ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಮಂಜೂರು ಮಾಡಲು ಅರ್ಜಿಗಳನ್ನು ಕರೆದಾಗ, ಸ್ತ್ರೀಶಕ್ತಿ ಸಂಘಗಳಿಗೆ ಮೊದಲನೆಯ ಆದ್ಯತೆ ನೀಡಬೇಕಾಗುತ್ತದೆ.

ಮಂಜೂರಾದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

(194) 62

ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ: ಅವುಗಳ ಸಂಖ್ಯೆ ಎಷ್ಟು?

ಆ) ಮಂಜೂರಾದ ವಸತಿ ಶಾಲೆಗಳಿಗೆ ಎಷ್ಟು ಸ್ವಂತ ಕಟ್ಟಡ ಇವೆ ಹಾಗೂ ಈ ಶಾಲೆಗಳಿಗೆ ಎಷ್ಟು ಖಾಯಂ ಸಿಬ್ಬಂದಿ ಮಂಜೂರಾಗಿದೆ.

ಇ) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ನಾರಾಯಣಸ್ವಾಮಿ: (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು)

ಅ) ಒಟ್ಟು–14

ಆ) 7 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ. ಈ ವಸತಿ ಶಾಲೆಗಳಲ್ಲಿ 176 ಬೋಧಕ ಮತ್ತು ಬೋಧಕೇತರ ಖಾಯಂ ಹುದ್ದೆಗಳು ಮಂಜೂರಾಗಿದೆ.

ಇ) ಹಂತ ಹಂತವಾಗಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

2008 ನೇ ಸಾಲಿನ ಆಯವ್ಯಯ

92 : (165)

ಶ್ರೀ ಆರ್. ನರೇಂದ್ರ (ಹನೂರು)

ಅ) 2008–09ನೇ ಸಾಲಿನಿಂದ ಸಾರಿಗೆ ಇಲಾಖೆಗೆ ಆಯವ್ಯಯದಲ್ಲಿ ಘೋಷಿಸಿದ್ದು ಹೊಸ ಯೋಜನೆಗಳು ಯಾವುವು? ಅವುಗಳಿಗೆ ಒದಗಿಸಿರುವ ಅಂದಾಜು ಅನುದಾನವೆಷ್ಟು; ಎಷ್ಟು ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚವಾಗಿದೆ; ಫಲಾನುಭವಿಗಳೆಷ್ಟು; (ವರ್ಷವಾರು ವಿವರ ಒದಗಿಸುವುದು)

ಆ) 2008–09 ನೇ ಸಾಲಿನಿಂದ ಆಯವ್ಯಯದಲ್ಲಿ ಘೋಷಿಸಿರುವ ಸಾರಿಗೆ ಇಲಾಖೆಯ ಯೋಜನೆ ಹಾಗೂ ಯೋಜನೇತರ ಅನುದಾನವೆಷ್ಟು; ಎಷ್ಟು ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚವಾಗಿದೆ (ವಿವರ ಒದಗಿಸುವುದು)?

ಶ್ರೀ ಆರ್ ಅಶೋಕ (ಮಾನ್ಯ ಉಪಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ)

ಅ) ವಿವರಗಳನ್ನು ಅನುಬಂಧ-"ಅ" ನಲ್ಲಿ ಒದಗಿಸಲಾಗಿದೆ
ಆ) ವಿವರಗಳನ್ನು ಅನುಬಂಧ-"ಆ" ನಲ್ಲಿ ಒದಗಿಸಲಾಗಿದೆ

ಅನುಬಂಧ–‘ಅ’

2008–09ನೇ ಸಾಲಿನ ವಿವರಗಳು

ಆಯವ್ಯಯ ಘೋಷಣೆಯ ಕಂಡಿಕೆ ಸಂ.	ಘೋಷಿಸಿದ್ದ ಹೊಸ ಯೋಜನೆಗಳು	ಒದಗಿಸಿರುವ ಅಂದಾಜು ಅನುದಾನ	ಆಗಿರುವ ವೆಚ್ಚ	ಷರಾ
150	ತರಬೇತಿ ಹೊಂದಿದ ಭಾರೀ ವಾಹನ ಚಾಲಕರ ಕೊರತೆಯನ್ನು ನಿವಾರಿಸಲು ಐದು ಕೋಟಿ ರೂ.ಗಳ ವೆಚ್ಚದಲ್ಲಿ ಭಾರೀ ವಾಹನಗಳ ನಾಲ್ಕು ಚಾಲನಾ ತರಬೇತಿ ಕೇಂದ್ರಗಳನ್ನು ಪ್ರತೀ ಕಂದಾಯ ವಿಭಾಗದಲ್ಲಿ ಸ್ಥಾಪಿಸಲಾಗುವುದು. ಮೈಸೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಮತ್ತು ಬಳ್ಳಾರಿಗಳಲ್ಲಿ ಖಾಸಗಿ–ಸಾರ್ವಜನಿಕ ಸಹಭಾಗಿತ್ವದಲ್ಲಿ ಟ್ರಕ್ ನಿಲ್ದಾಣಗಳನ್ನು ನಿರ್ಮಿಸಲಾಗುವುದು.	10 ಕೋಟಿ		ಸಾರಿಗೆ ಇಲಾಖೆಗೆ ಚಾಲನಾ ತರಬೇತಿ ಕೇಂದ್ರಗಳಿಗಾಗಿ ಯಾವುದೇ ಅನುದಾನ ಘೋಷಿಸಿರುವುದಿಲ್ಲ. ಆದಾಗ್ಯೂ 10 ಕೋಟಿ ರೂ.ಗಳು ದೇವರಾಜ್ ಅರಸ್ ಟ್ರಕ್ ಟರ್ಮಿನಲ್‌ಗೆ ಹಂಚಿಕೆಯಾಗಿದ್ದು, ಸದರಿ ಮೊತ್ತವನ್ನು ಬಿಡುಗಡೆಗೊಳಿಸಿದೆ.

2011–12ನೇ ಸಾಲಿನ ವಿವರಗಳು

ಆಯವ್ಯಯ ಘೋಷಣೆಯ ಕಂಡಿಕೆ ಸಂ.	ಘೋಷಿಸಿದ್ದ ಹೊಸ ಯೋಜನೆಗಳು	ಒದಗಿಸಿರುವ ಅಂದಾಜು ಅನುದಾನ	ಆಗಿರುವ ವೆಚ್ಚ	ಷರಾ
233	2010–11ನೇ ಸಾಲಿನಲ್ಲಿ ಸಾರಿಗೆ ಇಲಾಖೆಯು ಗ್ರಾಹಕ ಸ್ನೇಹಿ ಸೇವಾ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅದರಂತೆ ಚಾಲನಾ ಪರವಾನಗಿ ಪತ್ರ ಹಾಗೂ ನೋಂದಣಿ ಸರ್ಟಿಫಿಕೇಟ್‌ಗಳನ್ನು 25 ಲಕ್ಷ ಸ್ಮಾರ್ಟ್ ಕಾರ್ಡ್ ರೂಪದಲ್ಲಿ ಗ್ರಾಹಕರಿಗೆ ನೀಡಲಾಗುತ್ತಿದೆ. ಅಲ್ಲದೇ ಸುಮಾರು.			ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಗಣಕೀಕರಣ ಹಾಗೂ ಸ್ಮಾರ್ಟ್‌ಕಾರ್ಡ್ ನೀಡುವ ಯೋಜನೆಯನ್ನು ಸರ್ಕಾರಿ – ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಿದ್ದು,

	50,000 ಸರಕು ವಾಹನಗಳಿಗೆ ರಾಷ್ಟ್ರೀಯ ಪರವಾನಗಿಯನ್ನು ಅಂತರ್ಜಾಲದ ಮೂಲಕ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಅಂತರ್ಜಾಲದ ಮೂಲಕ ನೇರವಾಗಿ ಶುಲ್ಕ ಮತ್ತು ತೆರಿಗೆಯನ್ನು ಪಾವತಿಸಲು ಮತ್ತು ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಒದಗಿಸಲು ಉನ್ನತ ಮಟ್ಟದ ತಂತ್ರಜ್ಞಾನವನ್ನು ಅಳವಡಿಸಲು ಉದ್ದೇಶಿಸಲಾಗಿದೆ.			31.3.2012ರ ಅಂತ್ಯದಲ್ಲಿದಂತೆ, 54 ಲಕ್ಷ ಸ್ಮಾರ್ಟ್‌ಕಾರ್ಡ್ ಚಾಲನಾ ಅನುಜ್ಞಾಪತ್ರ ಹಾಗೂ ವಾಹನ ನೋಂದಣಿ ಪತ್ರವನ್ನು ನೀಡಲಾಗಿದೆ. ಸಾರಿಗೆ ಇಲಾಖೆಯಲ್ಲಿ ಶುಲ್ಕ ಮತ್ತು ವಾಹನ ತೆರಿಗೆ ಸಂಗ್ರಹಣೆಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸಲು ನ್ಯಾಷನಲ್ ಇನ್‌ಫಾರ್ಮೆಟಿಕ್ ಸೆಂಟರ್ ಇವರ ತಾಂತ್ರಿಕ ಸಹಕಾರದಿಂದ ಇ-ಪೇಮೆಂಟ್‌ಪದ್ಧತಿಯನ್ನು ಪರಿಚಯಿಸಲು ಸಿದ್ಧತೆಯನ್ನು ನಡೆಸಲಾಗುತಿದೆ.
234	ರಾಜ್ಯದಲ್ಲಿ ಚಾಲಕರ ಕೊರತೆ ಇರುವುದನ್ನು ಮನಗೊಂಡು ಗುಣಮಟ್ಟದ ಚಾಲಕರನ್ನು ಸಿದ್ಧಗೊಳಿಸಿ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಬೆಂಗಳೂರಿನಲ್ಲಿ ಮತ್ತು ಧಾರವಾಡದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಭಾರಿ ವಾಹನ ಚಾಲಕರ ತರಬೇತಿ ಶಾಲೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಗೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.	10 ಕೋಟಿ	10 ಕೋಟಿ	ಕ.ರಾ.ರ.ಸಾ.ಸಂಸ್ಥೆ ಮುಖಾಂತರ ಅನುಷ್ಠಾನ ಗೊಳಿಸಲಾಗುತ್ತಿದೆ. ಕಾಮಗಾರಿ ಪ್ರಗತಿಯಲ್ಲಿದೆ.

2012–13ನೇ ಸಾಲಿನ ವಿವರಗಳು

ಆಯವ್ಯಯ ಘೋಷಣೆಯ ಕಂಡಿಕೆ ಸಂ	ಘೋಷಿಸಿದ್ದ ಹೊಸ ಯೋಜನೆಗಳು	ಒದಗಿಸಿರುವ ಅಂದಾಜು ಅನುದಾನ	ಆಗಿರುವ ವೆಚ್ಚ	ಷರಾ
238	ಕೋಗನಳ್ಳಿ ಮತ್ತು ಹುಮ್ನಾಬಾದ್ ಚೆಕ್ ಪೋಸ್ಟ್‌ಗಳಲ್ಲಿ ತೂಕ ಹಾಕಿ ಮುಂದೆ ಸಾಗುವ (weigh in motion) ವ್ಯವಸ್ಥೆಯ ಸ್ಥಾಪನೆ.	6.00 ಕೋಟಿ		ಕೋಗನಳ್ಳಿ ಚೆಕ್ ಪೋಸ್ಟ್‌ನಲ್ಲಿ **weigh in motion** ವ್ಯವಸ್ಥೆ ಸ್ಥಾಪನೆ ಸಂಬಂಧ ರೂ. **381.00** ಲಕ್ಷಗಳ ಅಂದಾಜಿಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ. **ಹುಮ್ನಾಬಾದ್** ಚೆಕ್ ಪೋಸ್ಟ್‌ನಲ್ಲಿ **weigh in motion** ವ್ಯವಸ್ಥೆ ಸ್ಥಾಪನೆ ಸಂಬಂಧ **ರೂ.334.00** ಲಕ್ಷಗಳ ಅಂದಾಜಿಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ. 2012–13ನೇ ಸಾಲಿನಲ್ಲಿ ಈ ಕಾಮಗಾರಿಗಳಿಗೆ ತಲಾ 3 ಕೋಟಿ ರೂ. ವಿನಿಯೋಗಿಸಲು ಅನುವಾಗುವಂತೆ ಕಾಮಗಾರಿಯನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಮುಖ್ಯ ಅಭಿಯಂತರರು,

